ಅಚಲ

ಬಿಡಿಪ್ರತಿ : 4 ರೂ.

ತಿಂಗಳ ಪತ್ರಿಕೆ

ಏಪ್ರಿಲ್ - 2005

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಅಚಲ

ಸಂಪುಟ - 20 ಸಂಚಿಕೆ : 4

ಸಂಪಾದಕ ಮಂಡಲಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಅಚಲ - 20ರ ಸಂಭ್ರಮ

ಮುಖ್ಯ ಅತಿಥಿ :
ಶ್ರೀಮತಿ ಗೀತಾ ನಾಗಭೂಷಣ
(ಅಧ್ಯಕ್ಷೆ : ಕರ್ನಾಟಕ ಸಾಹಿತ್ಯ ಅಕಾಡೆಮಿ)

ಅಧ್ಯಕ್ಷತೆ :
ಶ್ರೀಮತಿ ಹೇಮಲತಾ ಮಹಿಷಿ
(ಅಧ್ಯಕ್ಷೆ : ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ)

ಪುಸ್ತಕ ಬಿಡುಗಡೆ

ಜಾಗೃತಿ ಗೀತೆಗಳು

ನಾಟಕ - 'ಊರ್ಮಿಳಾ'
ರಂಗ ಪ್ರಯೋಗ **-ಎನ್. ಮಂಗಳ**

ಸ್ಥಳ : **'ನಯನ' ಸಭಾಂಗಣ**
ದಿನಾಂಕ : **22.5.2005**
ಸಮಯ : **ಸಂಜೆ 5 ಘಂಟೆಗೆ**

ಎಲ್ಲರಿಗೂ ಸುಸ್ವಾಗತ

ಕಾರ್ಯಕಾರಿ ಸಮಿತಿ
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ನ್ಯಾಯ ದಕ್ಕಿತೇ ?

ಬೆಂಗಳೂರಿನ ಕಾಲೇಜು ವಿದ್ಯಾರ್ಥಿನಿ ಶೃತಿಗೆ ಆ್ಯಸಿಡ್ ಎರಚಿ ಕುರೂಪಗೊಳಿಸಿದ್ದ ರಾಜೇಶ್‌ನಿಗೆ ಕೆಲವು ದಿನಗಳ ಹಿಂದೆ ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಏಳು ವರ್ಷಗಳ ಕಠಿಣ ಸೆರೆಮನೆವಾಸ ಮತ್ತು ಐದು ಸಾವಿರ ರೂ.ಗಳ ದಂಡದ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಮೂರು ವರ್ಷಗಳ ಹಿಂದೆ ನಡೆದ ಈ ದುರಂತ ಘಟನೆ ನಮ್ಮ ನೆನಪಿನಿಂದ ಅಳಿಸಿಹೋಗುವುದಕ್ಕೆ ಮುಂಚೆಯೇ, ನಮ್ಮ ನ್ಯಾಯಾಲಯದ ನಿಧಾನ ನಡೆಯಲ್ಲಿ ತೀರ್ಪು ಇಷ್ಟು ಬೇಗ ಹೊರಬಿದ್ದಿರುವುದು ಒಂದು ಸೋಜಿಗವೇ ಸರಿ. ಈ ತೀರ್ಪಿನಿಂದ ಯಾರಿಗೆ ನ್ಯಾಯ ದಕ್ಕಿತು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಈ ಘಟನೆ ನಡೆದಾಗ ಮಾಧ್ಯಮಗಳಲ್ಲಿ ಸಾಕಷ್ಟು ಸುದ್ದಿ ಮಾಡಿದ ಈ ಪ್ರಕರಣ ಈಗ ತೀರ್ಪಿನ ಬಗ್ಗೆ ಮಾತನಾಡಿದ್ದು ಕಡಿಮೆಯೇ. ಪ್ರಕರಣ ನಡೆದಾಗ ಈ ಘಟನೆಯನ್ನು ದುರ್ಲಾಭ ಮಾಡಿಕೊಳ್ಳಲು ಕೆಲವು ಟಿ.ವಿ. ಚಾನೆಲ್‌ಗಳು ಮುಂದಾಗಿದ್ದು ಕೂಡ ಅಷ್ಟೇ ವಿಷಾದನೀಯ.

ಕಳೆದ ದಶಕದಲ್ಲಿ ನಮ್ಮ ರಾಜ್ಯದಲ್ಲಿ ಹತ್ತಕ್ಕೂ ಹೆಚ್ಚು ಹೆಣ್ಣು ಮಕ್ಕಳು ಆ್ಯಸಿಡ್ ದಾಳಿಗೆ ತುತ್ತಾಗಿದ್ದಾರೆ. ಈ ಎಲ್ಲ ಪ್ರಕರಣಗಳ ಅಪರಾಧಿಗಳಿಗೆ ಎಂತಹ ಶಿಕ್ಷೆ ದೊರಕಿದೆಯೋ ಆ ಮಾಹಿತಿ ತಿಳಿಯುವುದು ಕಷ್ಟ ಆದರೆ ಆ್ಯಸಿಡ್ ಎಸೆತದಿಂದ ಕುರೂಪಗೊಂಡ ಹೆಣ್ಣುಗಳ ಬದುಕಂತೂ ಘೋರವೂ, ಯಾತನಾಮಯವೂ ಆಗಿದೆ. ಅವರು ಅನುಭವಿಸುತ್ತಿರುವ ನೋವಿಗೆ ಹೋಲಿಸಿದರೆ ಅಪರಾಧಿಗಳಿಗೆ ಸಿಕ್ಕಿರುವ ಶಿಕ್ಷೆ ಏನೂ ಅಲ್ಲ. ಹಾಗೆಯೇ ಎಲ್ಲ ಅಪರಾಧಿಗಳಿಗೆ ಶಿಕ್ಷೆಯೂ ಆಗುವುದಿಲ್ಲ.

ಕರ್ನಾಟಕದಲ್ಲಿ ನಡೆದ ಹಲವಾರು ಆ್ಯಸಿಡ್ ಸಿಡಿತದ ಪ್ರಕರಣಗಳ ಅಧ್ಯಯನ ನಡೆಸಿ ಸೂಕ್ತ ಪರ್ಯಾಯ ಪರಿಹಾರಗಳನ್ನು ಸೂಚಿಸಿ ಮಹಿಳಾ ಜಾಗೃತಿ ಸಂಘಟನೆಯು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದ್ದ ವರದಿಯತ್ತ ಸರ್ಕಾರ ತನ್ನ ಜವಾಬ್ದಾರಿಯುತ ಪ್ರತಿಕ್ರಿಯೆಯನ್ನು ಇನ್ನೂ ತೋರಿಸದಾಗಿದೆ. ನೊಂದ ಈ ಹತಭಾಗಿನಿಯರ ಬದುಕನ್ನು ಪುನರ್‌ರೂಪಿಸಲು ಸರಕಾರ ಯಾವ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ? ಮಹಿಳಾ ಆಯೋಗವು ಈ ಸಂದರ್ಭದಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಲಿಂಗ ದೌರ್ಜನ್ಯದ ಹೊಸ ಸ್ವರೂಪವಾಗಿ ಪರಿಣಮಿಸಿರುವ, ವೈಜ್ಞಾನಿಕತೆಯನ್ನು ದುರುಪಯೋಗಪಡಿಸುವುದರ ಮೂಲಕ ಕ್ರಿಮಿನಲ್ ಬುದ್ದಿಗೆ ಆಧಾರವಾಗಿರುವ, ಈ ಭಯಾನಕ ಸಮಸ್ಯೆಯ ಬಗ್ಗೆ ಇನ್ನೂ ಹೆಚ್ಚಿನ ಸಾಮಾಜಿಕ ತಿಳುವಳಿಕೆ, ಜಾಗೃತಿಯ ಪ್ರಸರಣ ಮೂಡಬೇಕಾಗಿದೆ. ಹೆಣ್ಣಿನ ಮೇಲೆ ನಡೆಯುವ ಎಲ್ಲ ದೌರ್ಜನ್ಯಗಳಲ್ಲಿ ಅತ್ಯಂತ ಹೀನಾಯವಾದ ಈ ಸಮಸ್ಯೆ ಮನುಷ್ಯತ್ವಕ್ಕೆ ಸವಾಲಾಗಿದೆ ; ಅಪಮಾನ ಮಾಡುವಂತಹುದಾಗಿದೆ. ಆದ್ದರಿಂದ ಈ ಸಮಸ್ಯೆಯ ಸುಳಿಗೆ ಸಿಕ್ಕ ನತದೃಷ್ಟೆಯರ ಕಣ್ಣೀರಿಗೆ ನ್ಯಾಯಾಲಯ ನೀಡುವ ನ್ಯಾಯದ ಜೊತೆಗೆ ಸರಕಾರ, ಸಮಾಜ - ಎಲ್ಲರೂ ಕೈ ಜೋಡಿಸಿ ಅವರಿಗೆ ಬೆಂಬಲವಾಗಬೇಕಾದ್ದು ಇಂದಿನ ಅವಶ್ಯಕತೆಯಾಗಿದೆ.

- ಎನ್. ಗಾಯತ್ರಿ

ಇಕ್ಕಟ್ಟು

ನೀವೇನೇ ಹೇಳಿ
ಏನಾದರೂ ಮಾಡಿಕೊಳ್ಳಿ
ತಲೆಚಿಟ್ಟು ಹಿಡಿದಿದೆ
ಜಿಗುಪ್ಸೆ ತಾತ್ಸಾರ ಸಿಟ್ಟು
ಆವರಿಸಿದೆ ದಿನದಿನವೂ
ಅದೇ ರಾಗ ಏನು ತಿಂಡಿ
ಪಲ್ಯ ಸಾರು ಸಾಂಬಾರು
ಯೋಚಿಸಿ ಜೋಡಿಸಿ
ವೈರಾಗ್ಯವೇ ಮುತ್ತಿದೆ
ಹಾಕಬೇಕಿದೆ ನಾಲ್ಕೈದು
ದಿನಗಳಿಗಾದರೂ ರಜಾ
ಅಡಿಗೆಯ ಮನೆಗೆ
ಮಂಜೂರು ಮಾಡುವಿರಾ ?

ಓಹೋ ಅದಕೇನು
ಯಾರಿಗುಂಟು ಯಾರಿಗಿಲ್ಲ
ಹೋಟೆಲೂಟದ ಮಜಾ
ಹಾಕು ರಜಾ ಇಂದಿನಿಂದ

ಈಗ ದಂಗಾಗುವ
ಸರದಿ ಈಕೆಯದು
ಇದು ನಿಜವೊ ಭ್ರಮೆಯೊ
ಸುಮ್ಮಾನವೊ ದುಮ್ಮಾನವೊ
ಕಟಕಿಯೊ ಸಹಕಾರವೊ
ಸ್ವಾತಂತ್ರ್ಯವೊ ಬೆದರಿಕೆಯೊ
ಅರಿಯಲಾಗದೆ ಚಡಪಡಿಕೆ

ಹೋಟೆಲಿಗೆ ಹೋಗೋಣವೆಂದರೆ
ಸಂತಸಕಿಂತ ದಿಗಿಲೇಕೆ
ಖರ್ಚಿನ ಮೂಲ ತಾನೆಂದೇ
ಯಾಕೀ ಅಪರಾಧೀ ಭಾವ
ಕೇಳುವ ಮೊದಲೇ ವಿವರಣೆ

ನೀಡುವ ದೈನ್ಯವ ಮೀರುವ
ದಾರಿಯ ನಿಲ್ಲದ ಹುಡುಕಾಟ
ಅಷ್ಟಕೂ ಬಿಡುಗಡೆ ಬೇಕಾದುದು
ಮನಸಿಂದಲೇ ಕಾರ್ಯದಿಂದಲೇ

ಯಾಕಾಗಬಾರದು ಅಡುಗೆಯ
ಸರದಿ ಅದಲುಬದಲು
ಹಾಗೆ ಸಾಕೆನಿಸಿದಾಗ ಹೇಳು
ನಾನೇ ಮಾಡುವೆ ನಳಪಾಕ

ಎಂದರೂ ತೃಪ್ತಿ ಸಿಕ್ಕಿತೇ
ಹೊರಕೋಣೆಯಲಿ ಕೂತು
ಸೀದ ಪಲ್ಯ ಉಕ್ಕಿದ ಹಾಲಿನ
ವಾಸನೆಯಿಂದ ಮುಕ್ತಿ ಎಲ್ಲಿ
ಗಡಿಯಾರದ ಮುಳ್ಳು
ಆಗದ ಅಡಿಗೆಯ ಅಳುಕು
ಅವಳಂತೆ ಇವನ ತಟ್ಟದಲ್ಲ
ಇದು ರಜೆಯೊ ಸಜೆಯೊ

ಹೌದೇನೇ ಕಮ್ಯುನಿಸ್ಟ್ ದೇಶಗಳಲಿ
ಮನೆ ಮನೇಲಿ ಅಡಿಗೆ
ಮಾಡುವುದೇ ಅಪರಾಧವಂತೆ
ಕಾಂಪ್ಲೆಕ್ಸಿಗೊಂದು ರೆಸ್ಟೋರೆಂಟಂತೆ
ಅಲ್ಲಿಂದ ಬಂದಾಕೆ ನಮ್ಮವಳ
ಪಾತ್ರೆ ಪಗಡಗಳ ಕಂಡು
ದಂಗಾದಳಂತೆ
ಇತ್ತಕ್ಯೂಬಾದಲ್ಲಿ
ಅಡುಗೆಯ ಪಾಳಿ ಇಬ್ಬರದೂ
ಎಂಬ ಅಂತೆಕಂತೆಗಳ ಕೇಳಿ
ಮತ್ತೆ ಮತ್ತೆ ಕಾಡುವುದವಳ
ತನಗೆ ಬೇಕಾದುದೇನು

—ಸಬಿಹಾ ಭೂಮಿಗೌಡ

ಸ್ತ್ರೀ ಮತ್ತು ಪ್ರತಿಕ್ರಾಂತಿ

- ಡಾ|| ಅಂಬೇಡ್ಕರ್

ಮನು ಶೂದ್ರರ ಮೇಲೆ ಮೃದುವಾಗಿದ್ದುದಕ್ಕಿಂತ ಸ್ತ್ರೀಯರ ಮೇಲೆ ಮೃದುವಾಗಿದ್ದನೆನ್ನುವುದು ಕಷ್ಟ. ಹೆಣ್ಣಿನ ಮೇಲೆ ಕೀಳು ಅಭಿಪ್ರಾಯದಿಂದಲೇ ಅವನು ಪ್ರಾರಂಭಿಸುತ್ತಾನೆ. ಮನು ಘೋಷಿಸುತ್ತಾನೆ :

213. ಪುರುಷರನ್ನು ಮೋಹಗೊಳಿಸುವುದೇ ಸ್ತ್ರೀಯ ಸ್ವಭಾವ ; ಆದ್ದರಿಂದಲೇ ವಿವೇಕಿಗಳು ಹೆಣ್ಣಿನ ಜೊತೆ ಏಕಾಂಗಿಗಳಾಗಿರುವುದಿಲ್ಲ.

214. ಮೂರ್ಖನಷ್ಟೇ ಅಲ್ಲ, ವಿದ್ವಾಂಸರನ್ನೂ ಕೂಡ ಹೆಂಗಸರು ಅಡ್ಡದಾರಿಗೆಳೆಯಬಲ್ಲರು ; ಕಾಮ ಕ್ರೋಧವಶರನ್ನಾಗಿ ಮಾಡಬಲ್ಲರು.

215. ತನ್ನ ತಾಯಿ, ಸೋದರಿ, ಮಗಳು ಇವರ ಜೊತೆ ಗಂಡಸು ಒಂಟಿಯಾಗಿರಬಾರದು ; ಏಕೆಂದರೆ ಇಂದ್ರಿಯಗಳು ಪ್ರಬಲವಾದವು ; ಅವು ವಿದ್ವಾಂಸರನ್ನೂ ಕೂಡ ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುತ್ತವೆ.

14. ಸ್ತ್ರೀಯರ ಕಾಮುಕತನವು ಸೌಂದರ್ಯ, ವಯಸ್ಸು ಒಂದನ್ನೂ ಗಣಿಸುವುದಿಲ್ಲ. ಕುರೂಪಿಯಾಗಲೀ ಅಥವಾ ಸುರೂಪಿಯಾಗಲೀ ಅವರಿಗೆ ಎಲ್ಲರೂ ಒಂದೇ ಎಂದು ಒಲಿಯುತ್ತಾರೆ.

15. ಪುರುಷರ ಬಗೆಗಿರುವ ಅವರ ಕಾಮುಕತನದಿಂದ, ಅವರ ಚಂಚಲ ಸ್ವಭಾವದಿಂದ, ಸ್ವಾಭಾವಿಕ ಹೃದಯಹೀನತೆಯಿಂದ ಅವರು ತಮ್ಮ ಗಂಡಂದಿರ ಮೇಲೆ ನಿಷ್ಠೆಯಿಲ್ಲದವರಾಗುತ್ತಾರೆ. ಅವರನ್ನು ಎಷ್ಟೇ ಸುರಕ್ಷಿತವಾಗಿ ಇಟ್ಟರೂ.

16. ಅವರಿಗೆ ಹುಟ್ಟಿನಿಂದಲೇ ಇಂಥ ಸ್ವಭಾವವನ್ನು ಬ್ರಹ್ಮ ನೀಡಿರುವುದನ್ನು ತಿಳಿದುಕೊಂಡು ಅವರನ್ನು ಜತನವಾಗಿಡುವುದನ್ನು ಗಂಡಸರು ಮಾಡಬೇಕು.

17. ಮಲಗುವುದು, ಕುಳಿತುಕೊಳ್ಳುವುದು, ಅಲಂಕಾರಗಳಲ್ಲಿ ಪ್ರೀತಿ, ಕಾಮ, ಕ್ರೋಧ, ಕಪಟ, ದ್ರೋಹ, ದುರ್ವರ್ತನೆ ಮನೋವಿಕಾರಗಳೂ ಸ್ತ್ರೀಯ ಜನ್ಮಸಿದ್ಧವುಗಳೆಂದು ಮನು ಹೇಳುತ್ತಾನೆ.

ಸ್ತ್ರೀಯರ ಬಗ್ಗೆ ಮನುಸ್ಮೃತಿಯ ಈ ಧೋರಣೆ ಒಂದು ಉದಾಹರಣೆ ಅಷ್ಟೆ. ಯಾವುದೇ ಸಂದರ್ಭಗಳಲ್ಲಿಯೂ ಸ್ತ್ರೀಯರು ಸ್ವತಂತ್ರರಾಗಿರಕೂಡದೆಂದು ಮನು ಹೇಳುತ್ತಾನೆ :

2. ಹಗಲು, ರಾತ್ರಿ ತಮ್ಮ ಹೆಂಗಸರನ್ನು ಗಂಡಸರು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು ; ಅವರು ಭೋಗಾಸಕ್ತರಾದರೆ ಅವರನ್ನು ಹದ್ದುಬಸ್ತಿನಲ್ಲಿಡಬೇಕು.

3. ಮಗುವಾಗಿದ್ದಾಗ ತಂದೆ ರಕ್ಷಿಸುತ್ತಾನೆ ; ಯೌವ್ವನದಲ್ಲಿ ಗಂಡ ರಕ್ಷಿಸುತ್ತಾನೆ ; ಮುದಿತನದಲ್ಲಿ ಪುತ್ರರು ರಕ್ಷಿಸುತ್ತಾರೆ ; ಹೆಂಗಸು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ.

5. ದುಷ್ಟ ಭಾವನೆಗಳು ಎಷ್ಟೇ ಸಣ್ಣವಾದರೂ ಹೆಂಗಸರನ್ನು ಅವುಗಳಿಂದ ಎಚ್ಚರಿಕೆಯಿಂದ ರಕ್ಷಿಸಬೇಕು ; ಏಕೆಂದರೆ ಅವರನ್ನು ರಕ್ಷಿಸದಿದ್ದರೆ ಅವರು ಎರಡು ಮನೆಗಳಿಗೂ ದುಃಖ ತಂದುಬಿಡುತ್ತಾರೆ.

6. ಎಲ್ಲಾ ವರ್ಣಗಳ ಪರಮ ಧರ್ಮವೆಂದರೆ, (ದುರ್ಬಲ ಪತಿಯಾದವನೂ ಕೂಡ) ತಮ್ಮ ಹೆಂಡಂದಿರನ್ನು ರಕ್ಷಿಸಬೇಕು.

147. ಹುಡುಗಿಯಾಗಲಿ, ಹೆಂಗಸಾಗಲಿ, ಮುದುಕಿಯಾಗಲಿ, ತಮ್ಮ ಮನೆಯಲ್ಲಾದರೂ ಏನನ್ನೂ ಸ್ವತಂತ್ರವಾಗಿ ಮಾಡಕೂಡದು.

148. ಬಾಲ್ಯದಲ್ಲಿ ತಂದೆಯ, ಯೌವ್ವನದಲ್ಲಿ ಗಂಡನ, ಅವನು ಮೃತನಾಗಿದ್ದರೆ ಪುತ್ರರ ಅಧೀನದಲ್ಲಿ ಸ್ತ್ರೀ ಇರಬೇಕು ; ಅವಳು ಸ್ವತಂತ್ರಳಾಗಿರಬಾರದು.

149. ತನ್ನ ತಂದೆ, ಗಂಡ ಅಥವಾ ಪುತ್ರರಿಂದ ಅವಳು ಬೇರೆ ಇರಲು ಆಶಿಸಬಾರದು ; ಹಾಗೆ ಮಾಡಿದರೆ ಅವಳು ಎರಡು ಕುಟುಂಬಗಳಿಗೂ ತಿರಸ್ಕಾರಾರ್ಹಳಾಗುತ್ತಾಳೆ. ಸ್ತ್ರೀ ದಾಂಪತ್ಯ ವಿಚ್ಛೇದನದ ಹಕ್ಕು ಇರಬಾರದು.

45. ಗಂಡ ಹೆಂಡತಿ ಅವಿಭಾಜ್ಯವಾಗಿರತಕ್ಕದ್ದು ; ಒಮ್ಮೆ ಮದುವೆ ಆದ ಮೇಲೆ ಹೆಣ್ಣಿಗೆ ವಿಚ್ಛೇದನವಿಲ್ಲ.

ವಿಚ್ಛೇದನ ಕುರಿತ ಕಾನೂನಿನ ಕಥೆ ಇಷ್ಟೇ ಎಂಬಂತೆ, ಮದುವೆ ಧಾರ್ಮಿಕವಿಧಿಯೆಂದು ಮನು ಹೇಳಿದ್ದಾನೆಂಬುದಾಗಿ ತಮ್ಮ ಅಂತಃಸಾಕ್ಷಿಯನ್ನು ಸಾಂತ್ವನಗೊಳಿಸುತ್ತ ವಿಚ್ಛೇದನಕ್ಕೆ ಮನು ಅವಕಾಶವೀಯಲಿಲ್ಲ ಎಂದು ಮದುವೆಯನ್ನು ಆದರ್ಶೀಕರಿಸುತ್ತ ಅನೇಕ ಹಿಂದೂಗಳು ಇಲ್ಲಿಗೆ ನಿಲ್ಲಿಸುತ್ತಾರೆ. ವಾಸ್ತವವಾಗಿ ಇದು ಸತ್ಯಕ್ಕೆ ದೂರವಾಗಿದೆ. ಅವನ ವಿಚ್ಛೇದನ ವಿರೋಧಿ ಕಾನೂನಿಗೆ ತುಂಬ ಭಿನ್ನವಾದ ಉದ್ದೇಶವಿದೆ. ಅದು ಗಂಡಸನ್ನು ಹೆಣ್ಣಿಗೆ ಕಟ್ಟುವುದಾಗಿರಲಿಲ್ಲ ; ಆದರೆ ಹೆಣ್ಣನ್ನು ಗಂಡಿಗೆ ಕಟ್ಟಿ, ಗಂಡನ್ನು ಸ್ವತಂತ್ರನನ್ನಾಗಿ ಬಿಡುವುದಾಗಿತ್ತು. ಏಕೆಂದರೆ ಮನು ಹೆಂಡತಿಯನ್ನು ತ್ಯಜಿಸುವ ಮನುಷ್ಯನನ್ನು ತಡೆಗಟ್ಟುವುದಿಲ್ಲ. ಅವನು ಹೆಂಡತಿಯನ್ನು ಬಿಡುವುದಕ್ಕೆ ಅಷ್ಟೇ ಅಲ್ಲ ಅವಳನ್ನು ಮಾರಾಟ ಮಾಡುವುದಕ್ಕೂ ಸಹ ಅನುಮತಿ ನೀಡುತ್ತಾನೆ. ಆದರೆ ಅವನು ಮಾಡುವುದೇನೆಂದರೆ ಹೆಂಡತಿ ಸ್ವತಂತ್ರಳಾಗುವುದನ್ನು ತಡೆಗಟ್ಟುತ್ತಾನೆ. ಮನು ಏನು ಹೇಳುತ್ತಾನೆಂದು ಗಮನಿಸಿ :

46. ಗಂಡ ಮಾರಾಟ ಮಾಡಿದರೂ, ತ್ಯಜಿಸಿದರೂ ಹೆಂಡತಿಗೆ ವಿಮೋಚನೆಯಿಲ್ಲ.

ಇದರ ಅರ್ಥ ಗಂಡ ಹೆಂಡತಿಯನ್ನು ಮಾರಾಟ ಮಾಡಿದರೆ ಅಥವಾ ಪರಿತ್ಯಜಿಸಿದರೆ ಅವಳನ್ನು ಕೊಂಡುಕೊಂಡವನ ಅಥವಾ ಸ್ವೀಕರಿಸಿದವನ ನ್ಯಾಯಸಮ್ಮತ ಹೆಂಡತಿಯಾಗಲಾರಳು. ಇದು ಅತಿಘೋರವಲ್ಲದಿದ್ದರೆ ಬೇರಾವುದೂ ಆಗಲಾರದು. ಆದರೆ ಮನುವಿಗೆ ತನ್ನ ಕಾನೂನಿನ ನ್ಯಾಯಾನ್ಯಾಯದ ಬಗ್ಗೆ ಚಿಂತೆಯಿಲ್ಲ. ಬೌದ್ಧಯುಗ ಆಳ್ವಿಕೆಯಲ್ಲಿ ಸ್ತ್ರೀ ಪಡೆದಿದ್ದ ಸ್ವಾತಂತ್ರ್ಯವನ್ನು ಅಪಹರಿಸುವುದೇ ಅವನ ಆಸೆಯಾಗಿತ್ತು. ತನ್ನ ಸ್ವಾತಂತ್ರ್ಯವನ್ನು ಅವಳು ದುರುಪಯೋಗಪಡಿಸಿಕೊಳ್ಳುತ್ತಿದ್ದುದನ್ನು ಶೂದ್ರನನ್ನು ಮದುವೆಯಾಗುವುದರ ಮೂಲಕ ವರ್ಣ ವ್ಯವಸ್ಥೆಯನ್ನು ನಾಶಪಡಿಸುತ್ತಿದ್ದುದನ್ನು ಮನು ಬಲ್ಲವನಾಗಿದ್ದನು. ಅವಳ ಸ್ವೇಚ್ಛಾಚಾರದಿಂದ ಮನು ರೋಸಿ ಹೋಗಿದ್ದನು ; ಅವಳ ಸ್ವಾತಂತ್ರ್ಯವನ್ನು ಅಪಹರಿಸಿ ಅವನು ಅದಕ್ಕೆ ನಿಲುಗಡೆ ಹಾಕಿದನು.

ಹೆಂಡತಿಯನ್ನು ಆಸ್ತಿಯ ವಿಷಯದಲ್ಲಿ ಮನು ಗುಲಾಮಳ ಸ್ಥಾನಕ್ಕೆ ಇಳಿಸಿಬಿಟ್ಟನು.

416. ಹೆಂಡತಿ, ಮಗ ಮತ್ತು ಆಳು - ಈ ಮೂವರಿಗೆ ಆಸ್ತಿ ಇರಬಾರದು ;

ಅವರು ಸಂಪತ್ತನ್ನು ಗಳಿಸಿದರೆ ಅದು ಅವರ ಯಜಮಾನನಿಗೆ ಸೇರತಕ್ಕದ್ದು. ಅವಿಭಕ್ತ ಕುಟುಂಬದಲ್ಲಿ ಅವಳ ಗಂಡನಿದ್ದರೆ, ವಿಧವೆಗೆ ಮನು ಜೀವನಾಂಶಕ್ಕೆ ಸಮ್ಮತಿಸುತ್ತಾನೆ ; ಪ್ರತ್ಯೇಕವಾಗಿದ್ದರೆ ಗಂಡನ ಆಸ್ತಿಯಲ್ಲಿ ವಿಧವೆಗೆ ಬರಬೇಕಾದ್ದನ್ನು ಕೊಡುತ್ತಾನೆ. ಆದರೆ ಮನು ಎಂದೂ ಅವಳಿಗೆ ಆಸ್ತಿಪಾಸ್ತಿಯ ಹಕ್ಕನ್ನು ಕೊಡುವುದಿಲ್ಲ.

ಮನುಸ್ಮೃತಿಯ ಪ್ರಕಾರ ಸ್ತ್ರೀಗೆ ದೇಹದಂಡನೆ ಕೊಡಬಹುದು ; ಹೆಂಡತಿಯನ್ನು ಹೊಡೆಯುವ ಹಕ್ಕನ್ನು ಮನು ಅವಳ ಗಂಡನಿಗೆ ನೀಡುತ್ತಾನೆ ;

299. ಹೆಂಡತಿ, ಮಗ, ಸೇವಕ, ವಿದ್ಯಾರ್ಥಿ ಮತ್ತು ರಕ್ತಸಂಬಂಧಿಯಾದ ಕಿರಿಯ ತಮ್ಮ - ಇವರು ತಪ್ಪು ಮಾಡಿದರೆ ಅವರನ್ನು ಚಾವಟಿಯಿಂದ ಅಥವಾ ಬೆತ್ತದಿಂದ ಹೊಡೆಯಬಹುದು.

ಬೇರೆ ಮಾತಿನಲ್ಲಿ ಹೇಳುವುದಾದರೆ ಸ್ತ್ರೀಯನ್ನು ಮನು ಶೂದ್ರನ ಸ್ಥಾನಕ್ಕೇ ತಳ್ಳಿಬಿಟ್ಟನು.

ಶೂದ್ರನಿಗೆ ಮಾಡಿದಂತೆಯೇ ಮನು ಸ್ತ್ರೀಗೂ ವೇದಾಧ್ಯಯನವನ್ನು ನಿಷಿದ್ಧಗೊಳಿಸಿದನು.

66. ಸ್ತ್ರೀಗೂ ಸಹ ಸಂಸ್ಕಾರಗಳು ಅಗತ್ಯವಾಗಿದೆ ; ಅವುಗಳನ್ನು ಮಾಡಲೇ ಬೇಕು. ಆದರೆ ಅವುಗಳನ್ನು ವೇದಮಂತ್ರೋಚ್ಚಾರಣೆಯಿಲ್ಲದೆ ಮಾಡಬೇಕು.

18. ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕಿಲ್ಲ. ಆದ್ದರಿಂದಲೇ ಅವರಿಗೆ ವೇದ ಮಂತ್ರಗಳಿಲ್ಲದೆ ಸಂಸ್ಕಾರ ಮಾಡಲಾಗುತ್ತದೆ. ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕಿಲ್ಲದಿರುವುದರಿಂದ ಅವರಿಗೆ ಧರ್ಮಜ್ಞಾನವಿಲ್ಲ. ಪಾಪ ನಿರ್ಮೂಲನೆಯಲ್ಲಿ ವೇದ ಮಂತ್ರೋಚ್ಚಾರಣೆ ಪ್ರಯೋಜನಕಾರಿಯಾಗಿದೆ. ಸ್ತ್ರೀಯರು ವೇದಮಂತ್ರಗಳನ್ನು ಉಚ್ಚರಿಸುವಂತಿಲ್ಲದಿರುವುದರಿಂದ ಅವರು ಸುಳ್ಳಿನಷ್ಟೇ ಅಶುದ್ಧರಾಗಿದ್ದಾರೆ.

ಬ್ರಾಹ್ಮಣ ಧರ್ಮದ ಪ್ರಕಾರ ಯಜ್ಞಯಾಗಾದಿಗಳ ಆಚರಣೆಯು ಧರ್ಮದ ಜೀವವಾಗಿದೆ. ಆದರೂ ಅವುಗಳನ್ನು ಆಚರಿಸಲು ಮನು ಸ್ತ್ರೀಯರಿಗೆ ಅವಕಾಶ ಕೊಡುವುದಿಲ್ಲ. ಮನು ಆದೇಶಿಸುತ್ತಾನೆ. :

36. ವೇದಗಳು ವಿಧಿಸಿರುವ ನಿತ್ಯ ಯಜ್ಞಗಳನ್ನು ಸ್ತ್ರೀ ಮಾಡಬಾರದು.

37. ಅವಳು ಅದನ್ನು ಮಾಡಿದರೆ ಅವಳು ನರಕಕ್ಕೆ ಹೋಗುತ್ತಾಳೆ. ಅಂಥ ಯಜ್ಞಗಳನ್ನು ಅವಳು ನೆರವೇರಿಸದಂತೆ ಅವಳನ್ನು ಅನರ್ಹಳನ್ನಾಗಿ ಮಾಡುವುದಕ್ಕಾಗಿಯೇ ಅವಳು ಬ್ರಾಹ್ಮಣ ಪುರೋಹಿತನ ನೆರವನ್ನು ಪಡೆಯದಂತೆ ಮಾಡುತ್ತಾನೆ.

205. ಸ್ತ್ರೀ ನೆರವೇರಿಸಿದ ಯಜ್ಞದಲ್ಲಿ ಬ್ರಾಹ್ಮಣನೆಂದೂ ಊಟ ಮಾಡಬಾರದು.

206. ಸ್ತ್ರೀಯರು ಆಚರಿಸಿದ ಯಜ್ಞಗಳು ಅಮಂಗಳಕಾರಿಯೂ ದೇವರಿಗೆ ಅಪ್ರಿಯವೂ ಆಗಿವೆ. ಆದ್ದರಿಂದ ಅವುಗಳನ್ನು ನಿವಾರಿಸಬೇಕು.

ಸ್ತ್ರೀಗೆ ಬೌದ್ಧಿಕ ಆಸಕ್ತಿಗಳಾಗಲೀ, ಸ್ವೇಚ್ಛೆಯಾಗಲೀ, ಸ್ವತಂತ್ರ ಆಲೋಚನೆಯಾಗಲೀ ಇರಬಾರದೆಂಬುದಿತ್ತು. ನಾಸ್ತಿಕ ಪಂಥವಾದಂಥ ಬೌದ್ಧಧರ್ಮಕ್ಕೆ ಅವಳು ಸೇರಬಾರದಾಗಿತ್ತು. ಅವಳು ಸೇರಿ ಮುಂದುವರಿದರೆ, ಎಲ್ಲರೂ ಸತ್ತಾಗ ಕೊಡುವ ಅರ್ಘ್ಯವನ್ನು ಅವಳು ಸತ್ತಾಗ ಕೊಡಬಾರದು.

ಕೊನೆಯದಾಗಿ ಜೀವನಾದರ್ಶದ ಬಗ್ಗೆ ಒಂದು ಮಾತು. ಮನು ಅದನ್ನು ಸ್ತ್ರೀಗೆ ಹೇಳುತ್ತಾನೆ ; ಅದನ್ನು ಅವನ ಮಾತಿನಲ್ಲಿಯೇ ಹೇಳುವುದು ಉತ್ತಮ :

151. ತಂದೆ ಅಥವಾ ತಂದೆಯ ಅನುಮತಿಯ ಮೇರೆಗೆ ಮದುವೆ ಮಾಡಿಕೊಟ್ಟವನಿಗೆ ಅವನು ಬದುಕಿರುವವರೆಗೂ, ಅವನು ಸತ್ತ ಮೇಲೂ ಅವಳು ವಿಧೇಯಳಾಗಿರಬೇಕು ; ಅವನ ನೆನಪನ್ನು ಅವಳು ಅಪಮಾನಗೊಳಿಸಬಾರದು.

152. ಗಂಡನು ದರಿದ್ರ ಅಥವಾ ನೀತಿಹೀನ ಅಥವಾ ಬೇರೆಡೆ ಕಾಮಾಸಕ್ತ ಅತವಾ ದುರ್ಗುಣಿ ಆಗಿದ್ದರೂ ಅವನನ್ನು ದೇವರೆಂದು ಸಾಧ್ವಿಯು ನಿರಂತರವಾಗಿ ಪೂಜಿಸಬೇಕು.

153. ಗಂಡಂದಿರಿಲ್ಲದೆ ಯಜ್ಞ, ವ್ರತ, ಉಪವಾಸಗಳನ್ನು ಸ್ತ್ರೀಯರು ಆಚರಿಸಬಾರದು ; ಹೆಂಡತಿಯು ಗಂಡನಿಗೆ ವಿಧೇಯಳಾಗಿದ್ದರೆ ಆ ಕಾರಣಕ್ಕಾಗಿಯೇ ಅವಳು ಉನ್ನತ ಸ್ವರ್ಗವನ್ನು ಪಡೆಯುತ್ತಾಳೆ.

153. ವೇದೋಕ್ತವಾಗಿ ಮದುವೆಯಾದ ಪತಿಯು ಎಲ್ಲಾ ಕಾಲ ದಲ್ಲಿಯೂ ಇಹಲೋಕ ಮತ್ತು ಪರಲೋಕಗಳಲ್ಲಿಯೂ ತನ್ನ ಹೆಂಡತಿಗೆ ಸಂತೋಷದ ಮೂಲವಾಗಿದ್ದಾನೆ.

151. ಅವಳು ಸದಾ ಸಂತೋಷದಿಂದಿರಬೇಕು, ಗೃಹಕೃತ್ಯಗಳನ್ನು ಜಾಣೆಯಾಗಿ ನಡೆಸಬೇಕು ; ಪಾತ್ರೆ ಪದಾರ್ಥಗಳನ್ನು ಎಚ್ಚರಿಕೆಯಿಂದ ಶುದ್ಧವಾಗಿಡಬೇಕು ; ಮಿತವ್ಯಯಿಯಾಗಿ ಇರಬೇಕು.

ಇದನ್ನೇ ಹಿಂದುಗಳು ಸ್ತ್ರೀಯರ ಉನ್ನತ ಆದರ್ಶವೆಂದು ಪರಿಗಣಿಸುತ್ತಾರೆ ! ಇದನ್ನು ಮನುವಿಗಿಂತ ಮೊದಲಿದ್ದ ಸ್ತ್ರೀಯ ಸ್ಥಾನದ ಜೊತೆ ಹೋಲಿಸಿ :

ಸ್ತ್ರೀಯರಿಗೂ ಉಪನಯನವಿತ್ತೆಂಬುದು ಅಥರ್ವವೇದ ದಿಂದ ಸ್ಪಷ್ಟವಾಗುತ್ತದೆ ; ಬ್ರಹ್ಮಚರ್ಯವನ್ನು ಮುಗಿಸಿದ ಹುಡುಗಿ ಮದುವೆಗೆ ಅರ್ಹಳೆಂದು ಅಲ್ಲಿ ಹೇಳಲಾಗಿದೆ. ವೇದ ಮಂತ್ರಗಳನ್ನು ಸ್ತ್ರೀಯರು ಪುನರುಚ್ಚರಿಸಬಹುದು. ಹಾಗೂ ಸ್ತ್ರೀಯರಿಗೆ ವೇದಗಳನ್ನು ಹೇಳಿಕೊಡುತ್ತಿದ್ದರೆಂಬುದು ಶ್ರೌತ ಸೂತ್ರದಿಂದ ಸ್ಪಷ್ಟವಾಗುತ್ತದೆ. ಸ್ತ್ರೀಯರು ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರೆಂಬುದಕ್ಕೂ, ಅವರು ವೇದದ ನಾನಾ ಶಾಖೆಗಳನ್ನು ಅಧ್ಯಯನ ಮಾಡುತ್ತಿದ್ದರೆಂಬುದಕ್ಕೂ, ಅವರು ಮೀಮಾಂಸೆಯಲ್ಲಿ ನಿಪುಣರಾಗಿದ್ದರೆಂಬುದಕ್ಕೂ, ಪಾಣಿನಿಯ ಅಷ್ಟಾಧ್ಯಾಯಿಯು ಪುರಾವೆ ಒದಗಿಸುತ್ತದೆ. ಸ್ತ್ರೀಯರು ಉಪಾಧ್ಯಾಯರಾಗಿದ್ದರೆಂಬುದಕ್ಕೂ ಪತಂಜಲಿಯ ಮಹಾಭಾಷ್ಯ ಪ್ರಮಾಣವಾಗಿದೆ. ಅತ್ಯಂತ ಕ್ಲಿಷ್ಟವಾದ ವಿಷಯಗಳಾದ ಧರ್ಮ, ತತ್ವ ಮತ್ತು ಅಧ್ಯಾತ್ಮಗಳನ್ನು ಕುರಿತ ಸಾರ್ವಜನಿಕ ಚರ್ಚೆಗಳಲ್ಲಿ ಸ್ತ್ರೀಯರು ಪುರುಷರ ಜೊತೆ ತೊಡಗಿದ್ದ ಕಥೆಗಳಿಗೇನೂ ಕಡಮೆಯಿಲ್ಲ. ಜನಕ ಮತ್ತು ಸುಲಭಾ, ಯಾಜ್ಞವಲ್ಕ್ಯ ಮತ್ತು ಗಾರ್ಗಿ, ಯಾಜ್ಞವಲ್ಕ್ಯ ಮತ್ತು ಮೈತ್ರೇಯಿ ಹಾಗೂ ಶಂಕರಾಚಾರ್ಯ ಮತ್ತು ವಿದ್ಯಾರ್ಥಿ. ನಡುವೆ ನಡೆದ ಬಹಿರಂಗ ಚರ್ಚೆಗಳು ಮನುಪೂರ್ವಯುಗಗಳಲ್ಲಿ ಭಾರತೀಯ ಸ್ತ್ರೀಜ್ಞಾನ ಮತ್ತು ವಿದ್ಯೆಯ ಅತ್ಯುನ್ನತ ಶಿಖರಗಳಿಗೆ ಏರಿದ್ದಳೆಂಬುದನ್ನು ತೋರಿಸುತ್ತದೆ.

ಮನು ಪೂರ್ವಕಾಲದಲ್ಲಿ ಸ್ತ್ರೀಯರನ್ನು ಅಪಾರವಾಗಿ ಗೌರವಿಸಲಾಗುತ್ತಿತ್ತು ಎನ್ನುವುದು ವಿವಾದಾತೀತವಾಗಿದೆ. ಪ್ರಾಚೀನ ಭಾರತದಲ್ಲಿ ರಾಜನ ಪಟ್ಟಾಭಿಷೇಕೋತ್ಸವದಲ್ಲಿ ತುಂಬಾ ಪ್ರಧಾನಪಾತ್ರವನ್ನು ವಹಿಸುತ್ತಿದ್ದ ರತ್ನಿಗಳಲ್ಲಿ ಮಹಾರಾಣಿಯೂ ಸೇರಿರುತ್ತಿದ್ದಳು ; ಇತರರಿಗೆ ಉಡುಗೊರೆಗಳನ್ನು ನೀಡಿದಂತೆ ಮಹಾರಾಜ ಅವಳಿಗೂ ನೀಡುತ್ತಿದ್ದನು. ಪಟ್ಟಾಭಿಷಿಕ್ತ ರಾಜ ಮಹಾರಾಣಿಗಷ್ಟೇ ಸನ್ಮಾನಿಸುತ್ತಿರಲಿಲ್ಲ. ಅವನು ತನ್ನ ಇತರ ಕೆಳವರ್ಣದ ಪತ್ನಿಯರನ್ನು ಪೂಜಿಸುತ್ತಿದ್ದನು. ಅದೇ ರೀತಿಯಲ್ಲಿ ಪಟ್ಟಾಭಿಷೇಕವಿಧಿಯಾದ ಮೇಲೆ ಮಹಾರಾಜನು ಮಂತ್ರಿಸೇನಾಧಿ ಪತಿಗಳ ಸತಿಯರಿಗೂ ಗೌರವಾರ್ಪಣೆ ಮಾಡುತ್ತಿದ್ದನು. ಕೌಟಿಲ್ಯನ ಕಾಲದಲ್ಲಿ ಹೆಂಗಸರು 12ನೇ ವಯಸ್ಸಿಗೂ, ಗಂಡಸರೂ 16ನೇ ವಯಸ್ಸಿಗೂ ಪ್ರಾಪ್ತವಯಸ್ಕರಾಗುತ್ತಾರೆಂದು ನಂಬಲಾಗಿತ್ತು. ಪ್ರೌಢಾವಸ್ಥೆಯ ವಯಸ್ಸೇ ಮದುವೆಯ ವಯಸ್ಸು ಆಗಿತ್ತು. ಆ ಮದುವೆಗಳು ಮೈನೆರೆದ ನಂತರವಾದ ಮದುವೆ ಗಳೆಂದು ಬೌಧಾಯನನ ಗೃಹ್ಯಸೂತ್ರಗಳಿಂದ ಗೊತ್ತಾಗುತ್ತದೆ. ಮದುವೆಯ ಸಂದರ್ಭದಲ್ಲಿ ವಧು ಮುಟ್ಟಾದರೆ ಪ್ರಾಯಶ್ಚಿತ್ತ ವ್ರತವನ್ನು ಅವಳಿಗೆ ವಿಶೇಷವಾಗಿ ವಿಧಿಸಬೇಕೆಂದು ಅದು ಹೇಳುತ್ತದೆ :

ಕೌಟಿಲ್ಯನಲ್ಲಿ ಒಪ್ಪಿಗೆ ಕೊಡುವ ವಯಸ್ಸಿನ ಬಗ್ಗೆ ಕಾನೂನಿಲ್ಲ. ಅದೇಕೆಂದರೆ, ಮದುವೆಗಳು ಪ್ರಾಪ್ತವಯಸ್ಕರಾದ ಮೇಲೆ ನಡೆಯುತ್ತಿದ್ದವು. ಮದುವೆಯಾಗುವ ಮುನ್ನ ವಧು ಅಥವಾ ವರ ಬೇರೆ ವ್ಯಕ್ತಿಯ ಜೊತೆ ಲೈಂಗಿಕ ಸಂಬಂಧವನ್ನು ನಡೆಸಿ ಅದನ್ನು ಪ್ರಕಟಪಡಿಸದ ಅವನು ಅಥವಾ ಮುಟ್ಟಾದ ಅವಳ ಬಗ್ಗೆ ಕೌಟಿಲ್ಯ ಹೆಚ್ಚು ಕಾಳಜಿಯನ್ನು ವ್ಯಕ್ತಪಡಿಸುತ್ತಾನೆ.

ಮೊದಲನೆಯ ವಿಷಯದ ಬಗ್ಗೆ ಕೌಟಿಲ್ಯ ಹೇಳುತ್ತಾನೆ :

''ಹುಡುಗಿ ಬೇರೊಬ್ಬನ ಜೊತೆ ಮಲಗಿದ್ದ ವಿಷಯವನ್ನು ತಿಳಿಸದೆ ಯಾರು ಮದುವೆ ಮಾಡಿಕೊಡುತ್ತಾನೋ ಅವನಿಗೆ ದಂಡ ಹಾಕಿ ಶಿಕ್ಷೆ ವಿಧಿಸಬೇಕು. ಅಷ್ಟೇ ಅಲ್ಲ, ಅವನು ಕನ್ಯಾಶುಲ್ಕ ಮತ್ತು ಸ್ತ್ರೀಧನ ವಾಪಸ್ಸು ಕೊಡಬೇಕು. ಗಂಡಿನ ದೋಷವನ್ನು ಹೇಳದೆ ಯಾರು ಹೆಣ್ಣನ್ನು ಮದುವೆ ಮಾಡಿಕೊಳ್ಳುತ್ತಾರೋ ಅವರು ಮೇಲೆ ಹೇಳಿದ ದಂಡಕ್ಕಿಂತ ಎರಡು ಪಟ್ಟು ಹೆಚ್ಚು ದಂಡ ಕೊಡಬೇಕು. ಅಷ್ಟೇ ಅಲ್ಲ ಅವನು ಶುಲ್ಕವನ್ನೂ (ವಧುವಿಗೂ ತೆತ್ತಿದ್ದ) ಸ್ತ್ರೀಧನವನ್ನೂ ಕಳೆದುಕೊಳ್ಳುತ್ತಾನೆ.

''ಋತುಮತಿಯಾಗಿ ಮೂರು ವರ್ಷವಾದರೂ ಮದುವೆ ಯಾಗದ ತನ್ನದೆ ಜಾತಿ ಮತ್ತು ವರ್ಗಕ್ಕೆ ಸೇರಿದ ಹೆಣ್ಣಿನೊಡನೆ ಗಂಡಸು ಸಂಬಂಧ ಇಟ್ಟುಕೊಂಡರೆ ಅದು ಅಪರಾಧವಲ್ಲ ಮೊದಲ ಮುಟ್ಟಾಗಿ ಮೂರು ವರ್ಷಕ್ಕಿಂತ ಹೆಚ್ಚಾಗಿರುವ ದೇಹದ ಮೇಲೆ ಆಭರಣಗಳಿಲ್ಲದಿರುವ ಹೆಣ್ಣಿನೊಡನೆ ಬೇರೆ ಜಾತಿಯ ಗಂಡಸು ಸಂಬಂಧವಿಟ್ಟುಕೊಂಡರೂ ಕೂಡ ಅದು ಅಪರಾಧವಲ್ಲ''

ಮನುವಿನಂತಲ್ಲದೆ, ಕೌಟಿಲ್ಯನದು ಏಕವಿವಾಹ ವಿಚಾರ, ಕೆಲವು

ಸಂದರ್ಭಗಳಲ್ಲಿ ಮಾತ್ರ ಒಬ್ಬಳಿಗಿಂತ ಹೆಚ್ಚು ಹೆಂಡಂದಿರನ್ನು ಮನುಷ್ಯ ಮದುವೆಯಾಗಬಹುದು. ಮುಂದಿನ ಮಾತುಗಳಲ್ಲಿ ಅವುಗಳನ್ನು ಕೌಟಿಲ್ಯ ಹೇಳುತ್ತಾನೆ:

"ಒಂದು ಪಕ್ಷ ಹೆಂಗಸು (ಜೀವಂತ) ಮಕ್ಕಳನ್ನು ಹಡೆಯದಿದ್ದರೆ ಅಥವಾ ಗಂಡು ಸಂತಾನವಿಲ್ಲದಿದ್ದರೆ, ಅಥವಾ ಅವಳು ಬಂಜೆಯಾಗಿದ್ದರೆ, (ಇನ್ನೊಬ್ಬಳನ್ನು ಮದುವೆಯಾಗಲು) ಅವಳ ಗಂಡ ಎಂಟು ವರ್ಷಗಳ ತನಕ ಕಾಯಬೇಕು. ಅವಳು ಸತ್ತ ಮಗುವನ್ನು ಹೆತ್ತರೆ, ಅವನು ಹತ್ತು ವರ್ಷದವರೆಗೆ ಕಾಯಬೇಕು. ಅವಳಿಗೆ ಬರಿ ಹೆಣ್ಣುಮಕ್ಕಳೇ ಆದರೆ ಅವನು ಹನ್ನೆರಡು ವರ್ಷ ಕಾಯಬೇಕು. ಆಗ ಅವನಿಗೆ ಗಂಡು ಸಂತಾನದ ಅಪೇಕ್ಷೆಯಾದರೆ ಅವನು ಬೇರೊಬ್ಬಳನ್ನು ಮದುವೆಯಾಗಬಹುದು. ಈ ಕಾನೂನನ್ನು ಅವನು ಭಂಗಮಾಡಿದರೆ, ಅವನು ಶುಲ್ಕ, ಸ್ತ್ರೀಧನ, ಸೂಕ್ತ ಧನಪರಿಹಾರ (ಅಧಿವೇದಾನಿಕ ಮಾರ್ತಂ) ಇವನ್ನಷ್ಟೇ, ಅಲ್ಲದೆ ಸರ್ಕಾರಕ್ಕೆ 24 ಪಣ ದಂಡ ಕೊಡಬೇಕು. ಅವನ ಜೊತೆ ಮದುವೆಯಾದಾಗ ಆ ಹೆಂಗಸರಿಗೆ ಶುಲ್ಕ ಮತ್ತು ಸ್ತ್ರೀಧನ ಅಗತ್ಯ ಮೊತ್ತವನ್ನು ಕೊಡದಿದ್ದರೆ ಅದನ್ನೂ ಕೊಟ್ಟು ತನ್ನ ಹೆಂಡತಿಯರಿಗೆ ಸೂಕ್ತ ಪರಿಹಾರ ಮತ್ತು ಜೀವನಾಂಶ ನೀಡಿ, ಎಷ್ಟು ಜನ ಹೆಂಗಸರನ್ನಾದರೂ ಅವನು ಮದುವೆಯಾಗಬಹುದು ; ಏಕೆಂದರೆ ಗಂಡು ಮಕ್ಕಳನ್ನು ಹೆರುವುದಕ್ಕಾಗಿಯೇ ಸ್ತ್ರೀಯರು ಸೃಷ್ಟಿಯಾಗಿದ್ದಾರೆ."

ಮನುವಿನ ಕಾಲದಲ್ಲಿ ಇದ್ದಂತೆ ಅಲ್ಲದೆ, ಕೌಟಿಲ್ಯನ ಕಾಲದಲ್ಲಿ ಸ್ತ್ರೀಯರು, ಪರಸ್ಪರ ದ್ವೇಷ ಮತ್ತು ವೈರತ್ವದ ಆಧಾರದ ಮೇಲೆ, ವಿಚ್ಛೇದನವನ್ನು ಪಡೆಯಬಹುದಿತ್ತು.

"ಗಂಡನನ್ನು ದ್ವೇಷಿಸುವ ಹೆಂಗಸು ಅವನ ಇಚ್ಛೆಗೆ ವಿರುದ್ಧ ದಾಂಪತ್ಯ ವಿಚ್ಛೇದನ ಪಡೆಯಲು ಸಾಧ್ಯವಿಲ್ಲ ; ಹೆಂಡತಿಯ ಇಚ್ಛೆಗೆ ವಿರುದ್ಧ ಗಂಡ ವಿಚ್ಛೇದನ ಪಡೆಯಲು ಸಾಧ್ಯವಿಲ್ಲ. ಆದರೆ ಪರಸ್ಪರ ವೈರತ್ವದಿಂದ ವಿಚ್ಛೇದನವನ್ನು ಪಡೆಯಬಹುದು. (ಪರಸ್ಪರಂ ದ್ವೇಷಾನ್‌ಮೋಕ್ಷಃ) ತನ್ನ ಹೆಂಡತಿಯಿಂದ ಅಪಾಯವಿದೆ ಎಂದು ಕಂಡ ಮನುಷ್ಯ ವಿಚ್ಛೇದನ ಬಯಸಿದರೆ (ಮೋಕ್ಷಂ ಇಚ್ಛೇತ) ಅವಳಿಗೆ (ಅವಳ ಮದುವೆ ಸಂದರ್ಭದಲ್ಲಿ) ನೀಡಿದ್ದ ಎಲ್ಲವನ್ನೂ ಹಿಂದಿರುಗಿಸತಕ್ಕದ್ದು. ತನ್ನ ಗಂಡನಿಂದ ತನಗೆ ಅಪಾಯವಿದೆ ಎಂದು ಕಂಡ ಹೆಂಗಸು ವಿಚ್ಛೇದನ ಬಯಸಿದರೆ, ಅವಳು ತನ್ನ ಆಸ್ತಿಯ ಹಕ್ಕನ್ನು ಕಳೆದುಕೊಳ್ಳುತ್ತಾನೆ. ತನ್ನ ಗಂಡ ದುಷ್ಟನಾಗಿದ್ದರೆ ಹೆಂಡತಿ ಅವನನ್ನು ತ್ಯಜಿಸಬಹುದು.

"ಅನಿರ್ದಿಷ್ಟ ಕಾಲದವರೆಗೆ ಅಗತ್ಯವಾದಷ್ಟು ಊಟ ಮತ್ತು ಬಟ್ಟೆಯನ್ನು ಪಡೆಯಲು ಹೆಂಗಸಿಗೆ ಹಕ್ಕಿದ್ದರೆ ಜೀವನಾಂಶಕ್ಕಾಗಿ ಅದನ್ನು ಅವಳಿಗೆ ಕೊಡತಕ್ಕದ್ದು ; ಅಥವಾ ಹೆಚ್ಚು ಅಗತ್ಯವಾದರೆ ಅದನ್ನು ಜೀವನಾಂಶ ಕೊಡುವವನ ಆದಾಯಕ್ಕನುಗುಣವಾಗಿ ಕೊಡತಕ್ಕದ್ದು. ನಿರ್ದಿಷ್ಟ ಕಾಲವಾದರೆ (ಈ ಅವಧಿಗೆ ಅವಳಿಗೆ ಕೊಡುವಂಥ ವಸ್ತುಗಳ ಜೊತೆಗೆ ಮೊತ್ತದ ಹತ್ತನೇ ಒಂದು ಭಾಗ ಸೇರಿರುತ್ತದೆ), ಆಗ ಪೋಷಕನ ಆದಾಯಕ್ಕನುಸಾರವಾಗಿ ನಿಗದಿಪಡಿಸಿದ ಸ್ವಲ್ಪ ಹಣವನ್ನೂ, ಹಾಗೆಯೇ ಅವಳ ಶುಲ್ಕವನ್ನು ಕೊಡದಿದ್ದರೆ, ಆಸ್ತಿ ಹಾಗೂ (ಅವಳ ಗಂಡ ಪುನರ್ವಿವಾಹ ವಾಗಲು ಅನುಮತಿ ನೀಡಲು) ಪರಿಹಾರವನ್ನೂ ಕೊಡತಕ್ಕದ್ದು. ತನ್ನ ಮಾವನ ಕುಟುಂಬಕ್ಕೆ ಸೇರಿದ ಯಾರ ರಕ್ಷಣೆಯಲ್ಲಾದರೂ ಆಕೆ ಇದ್ದರೆ ಅಥವಾ ಆಕೆ ಸ್ವತಂತ್ರವಾಗಿ ಜೀವಿಸಿದರೆ, ಆಗ ಆಕೆಯ ಗಂಡನ ಮೇಲೆ (ಅವಳ ಜೀವನಾಂಶಕ್ಕಾಗಿ) ಫಿರ್ಯಾದು ಹೂಡಬಾರದು. ಹೀಗೆ ಜೀವನಾಂಶದ ವಿಷಯವನ್ನು ನಿರ್ಣಯಿಸಲಾಗಿದೆ."

ಕೌಟಿಲ್ಯನ ಕಾಲದಲ್ಲಿ ಹೆಂಗಸು ಅಥವಾ ವಿಧವೆ ಪುನರ್ ವಿವಾಹವಾಗುವುದಕ್ಕೆ ಯಾವುದೇ ನಿಷೇಧವಿರಲಿಲ್ಲ.

"ತನ್ನ ಗಂಡ ಸತ್ತ ನಂತರ ಹೆಂಗಸು ಧಾರ್ಮಿಕ ಜೀವನವನ್ನು ನಡೆಸಲು ಇಷ್ಟಪಟ್ಟರೆ ಕೂಡಲೆ ಅವಳು ತನ್ನ ದತ್ತಿ ಮತ್ತು ಆಭರಣಗಳನ್ನಲ್ಲದೆ ತನಗೆ ಬರಬೇಕಾದ ಶುಲ್ಕದ ಬಾಕಿಯನ್ನೂ ಸ್ವೀಕರಿಸತಕ್ಕದ್ದು. ಇವೆರಡನ್ನು ಪಡೆದುಕೊಂಡ ನಂತರ ಆಕೆ ಬೇರೊಬ್ಬನನ್ನು ಮರುಮದುವೆ ಆದರೆ ಅವಳು ಬಡ್ಡಿಸಹಿತ ಅವುಗಳನ್ನು ವಾಪಸ್ಸು ಮಾಡುವಂತೆ ಬಲವಂತಪಡಿಸಬೇಕು. ಆಕೆ ಎರಡನೆಯ ಮದುವೆಗೆ ಅಪೇಕ್ಷೆ ಪಟ್ಟರೆ, ಅವಳ ಮಾವ, ಅವಳ ಗಂಡ ಅಥವಾ ಇಬ್ಬರೂ ಅವಳಿಗೆ ನೀಡಿದ್ದನ್ನು ಅವಳ ಪುನರ್ ವಿವಾಹದ ಸಂದರ್ಭದಲ್ಲಿ ಅವಳಿಗೆ ಕೊಡತಕ್ಕದ್ದು. ಗಂಡಂದಿರು ದೀರ್ಘಕಾಲ ದೂರವಿದ್ದಾಗ ಹೆಂಡಂದಿರು ಮರುಮದುವೆ ಯಾಗುವ ಕಾಲವನ್ನು ಕುರಿತು ವಿವರಿಸಲಾಗುವುದು."

"ತನ್ನ ಮಾವನು ಆರಿಸಿದ ವ್ಯಕ್ತಿಯಲ್ಲದೆ ಬೇರೆಯಾರನ್ನಾದರೂ ವಿಧವೆ ಮದುವೆಯಾದರೆ ತನಗೆ ತನ್ನ ಮಾವ ಕೊಟ್ಟದ್ದನ್ನೂ ಸತ್ತ ಗಂಡ ಕೊಟ್ಟದ್ದನ್ನೂ ಆಕೆ ಕಳೆದುಕೊಳ್ಳುವಳು."

"ಯಾರಾದರೂ ಜ್ಞಾತಿಯನ್ನು ಹೆಂಗಸು ಮರುಮದುವೆ ಮಾಡಿಕೊಂಡರೆ ಜ್ಞಾತಿಗಳು ಅವಳು ತನ್ನದೆಂದು ತಂದಿದ್ದ ಅವಳ ಹಿಂದಿನ ಮಾವ ಕೊಟ್ಟಿದ್ದ ಸಂಪತ್ತನ್ನೆಲ್ಲ ಅವನಿಗೆ (ಹಿಂದಿನ ಮಾವನಿಗೆ) ಹಿಂದಿರುಗಿಸತಕ್ಕದ್ದು. ಯಾವನು ನ್ಯಾಯಯುತವಾಗಿ ಹೆಂಗಸನ್ನು ತನ್ನ ರಕ್ಷಣೆಗೆ ತೆಗೆದುಕೊಳ್ಳುತ್ತಾನೋ ಅವನು ಅವಳ ಆಸ್ತಿಯನ್ನೂ ರಕ್ಷಿಸಬೇಕು. ಮದುಮದುವೆಯಾದ ಮೇಲೆ ಯಾವ ಹೆಂಗಸೂ ತನ್ನ ಆಸ್ತಿಗೆ ಹಕ್ಕನ್ನು ಸ್ಥಾಪಿಸಲು ಪ್ರಯತ್ನಿಸಬಾರದು."

"ಆಕೆ ಧಾರ್ಮಿಕ ಜೀವನ ನಡೆಸಿದರೆ ತನ್ನ ಆಸ್ತಿಯನ್ನು ಅವಳು ಅನುಭವಿಸಬಹುದು. ಒಬ್ಬ ಪುತ್ರ ಅಥವಾ ಪುತ್ರರು ಆಕೆಗೆ ಇದ್ದರೆ ಆಕೆ ತನ್ನ ಸ್ತ್ರೀಧನವನ್ನು ನಿರ್ಬಂಧವಿಲ್ಲದೆ ಬಳಸಲು ಆಕೆಯು ಸ್ವತಂತ್ರಳಲ್ಲ ; ಏಕೆಂದರೆ ಅವಳ ಆಸ್ತಿ ಅವಳ ಪುತ್ರರಿಗೆ ಹೋಗಬೇಕು.

"ತನ್ನ ಮೊದಲ ಗಂಡನಿಂದಾದ ತನ್ನ ಪುತ್ರರನ್ನು ಸಾಕಲು ತನ್ನ

ಆಸ್ತಿಯನ್ನು ತೆಗೆದುಕೊಳ್ಳುತ್ತೇನೆಂದು ಮರುಮದುವೆಯ ನಂತರ ಆಕೆ ಹೇಳಿದರೆ, ಅದನ್ನು ಆಕೆ ತನ್ನ ಪುತ್ರರ ಹೆಸರಿನಲ್ಲಿ ಇಡತಕ್ಕದ್ದು. ಅನೇಕ ಪುತ್ರರನ್ನು ಒಬ್ಬ ಹೆಂಗಸು ಅನೇಕ ಗಂಡಂದಿರಿಂದ ಹಡೆದರೆ ತನಗೆ ಅವರಿಂದ ಬಂದ ಆಸ್ತಿಯನ್ನು ಹಾಗೆ ಹಾಗೆಯೇ ಅವಳು ಅವರವರ ಪುತ್ರರಿಗೆ ಕೊಡತಕ್ಕದ್ದು. ಪೂರ್ಣ ಅಧಿಕಾರದಿಂದ ಅನುಭೋಗಿಸಲೂ ವಿಕ್ರಯಿಸಲೂ ಕೊಟ್ಟ ಆಸ್ತಿಯನ್ನು ಕೂಡ ಹೆಂಗಸು ಮರು ಮದುವೆಯಾದ ಮೇಲೆ ತನ್ನ ಪುತ್ರರ ಹೆಸರಿನಲ್ಲಿ ಇಡಬೇಕು.''

''ಬಂಜೆಯು ತನ್ನ ಮೃತ ಪತಿಯ ಶಯ್ಯೆಗೆ ನಿಷ್ಠಳಾಗಿದ್ದರೆ, ತನ್ನ ಗುರುವಿನ ರಕ್ಷಣೆಯಲ್ಲಿ ಅವಳು ಬದುಕಿರುವವರೆಗೆ ತನ್ನ ಆಸ್ತಿಯನ್ನು ಅನುಭೋಗಿಸಬಹುದು ; ಏಕೆಂದರೆ ವಿಪತ್ತುಗಳನ್ನು ನಿವಾರಿಸಲು ಸ್ತ್ರೀಯರಿಗೆ ಆಸ್ತಿಯನ್ನು ದತ್ತಿಬಿಡಬೇಕು. ಅವಳ ಸಾವಿನ ನಂತರ ಅವಳ ಆಸ್ತಿ ಅವಳ ದಾಯಾದಿಗಳಿಗೆ ಹೋಗತಕ್ಕದ್ದಲ್ಲ. ಹೆಂಡತಿ ಸತ್ತು ಗಂಡ ಬದುಕಿದ್ದರೆ, ಆಗ ಅವಳ ಪುತ್ರರು ಮತ್ತು ಪುತ್ರಿಯರು ಅವಳ·ಆಸ್ತಿಯನ್ನು ತಮ್ಮ ತಮ್ಮಲ್ಲೇ ಹಂಚಿಕೊಳ್ಳಬೇಕು. ಅವಳಿಗೆ ಪುತ್ರರಿಲ್ಲದಿದ್ದರೆ ಅವಳ ಪುತ್ರಿಯರೇ ಅದನ್ನು ಪಡೆಯತಕ್ಕದ್ದು. ಅವರೂ ಇಲ್ಲದಿದ್ದರೆ ಅವಳ ಗಂಡ ಅವಳಿಗೆ ಕೊಟ್ಟಿದ್ದ ಶುಲ್ಕದ ಮೊತ್ತವನ್ನು ಅವನೇ ತೆಗೆದುಕೊಳ್ಳಬೇಕು ; ಹಾಗೂ ಅವಳ ಬಂಧುಗಳು ಅವಳಿಗೆ ನೀಡಿದ್ದ ಉಡುಗೊರೆ ಅಥವಾ ಬಳುವಳಿಯನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಹೀಗೆ ಸ್ತ್ರೀಧನ ವಿಷಯವನ್ನು ನಿರ್ಣಯಿಸಲಾಗಿದೆ.''

''ಶೂದ್ರ, ವೈಶ್ಯ, ಕ್ಷತ್ರಿಯ ಅಥವಾ ಬ್ರಾಹ್ಮಣ ಜಾತಿದೆ ಸೇರಿದ, ಮಕ್ಕಳನ್ನು ಹಡೆಯದ ಹೆಂಡತಿಯರು ಅನುಕ್ರಮವಾಗಿ ಒಂದು, ಎರಡು, ಮೂರು ಮತ್ತು ನಾಲ್ಕು ವರ್ಷಗಳವರೆಗೆ ದೂರ ಹೋಗಿರುವ ತಮ್ಮ ಗಂಡಂದಿರಿಗಾಗಿ ಕಾಯಬೇಕು; ಆದರೆ ಅವರು ಮಕ್ಕಳಿಗೆ ಜನ್ಮವಿತ್ತಿದ್ದರೆ ಗೈರುಹಾಜರಾದ ತಮ್ಮ ಗಂಡಂದಿರಿ ಗಾಗಿ ಅವರು ಒಂದು ವರ್ಷದವರೆಗೆ ಕಾಯಲೇಬೇಕು. ಅವರಿಗೆ ಜೀವನ ಪೋಷಣೆಯನ್ನು ಒದಗಿಸಿದ್ದರೆ ಈಗ ತಾನೆ ಹೇಳಿದ ಅವಧಿಗೆ ಎರಡರಷ್ಟು ಕಾಲ ಅವರು ಕಾಯಲೇಬೇಕು. ಅವರಿಗೇನನ್ನೂ ಒದಗಿಸದಿದ್ದರೆ, ಅವರ ಶ್ರೀಮಂತ ಜ್ಞಾತಿಗಳು ನಾಲ್ಕು ಅಥವಾ ಎಂಟು ವರ್ಷಗಳವರೆಗೆ ಅವರನ್ನು ಸಾಕತಕ್ಕದ್ದು. ಆಗ ಅವರ ಮದುವೆಯಲ್ಲಿ ಬಂದ ಉಡುಗೊರೆಗಳನ್ನು ತೆಗೆದುಕೊಂಡು ಜ್ಞಾತಿಗಳು ಅವರಿಗೆ ಮದುವೆಯಾಗಲು ಅನುಮತಿ ನೀಡತಕ್ಕದ್ದು. ಗಂಡ ಬ್ರಾಹ್ಮಣನಾಗಿದ್ದರೆ, ಅಧ್ಯಯನಕ್ಕೆ ದೂರ ಹೋಗಿದ್ದರೆ, ಮಕ್ಕಳಿಲ್ಲದ ಅವನ ಹೆಂಡತಿಯು ಹತ್ತು ವರ್ಷಗಳತನಕ ಅವನಿಗಾಗಿ ಕಾಯತಕ್ಕದ್ದು. ಆದರೆ ಅವಳಿಗೆ ಮಕ್ಕಳಾಗಿದ್ದರೆ ಹನ್ನೆರಡು ವರ್ಷಗಳವರೆಗೆ ಕಾಯಲೇಬೇಕು. ಗಂಡ ರಾಜಸೇವಕನಾಗಿದ್ದರೆ, ಅವನ ಹೆಂಡತಿ ಅವಳ ಸಾವಿನವರೆಗೆ ಕಾಯಬೇಕು ; ಆದರೆ ಅವಳು ಸಂತತಿ ಕೊನೆಗೊಳ್ಳ ಬಾರದೆಂಬ ಉದ್ದೇಶದಿಂದ ಸವರ್ಣ ಪತಿಗೆ (ಮೊದಲನೆಯ ಗಂಡನ ಗೋತ್ರಕ್ಕೆ ಸೇರಿದ ಎರಡನೆಯ ಪತಿಗೆ) ಮಕ್ಕಳನ್ನು ಹಡೆದರೂ ಕೂಡ ಅವಳನ್ನು ತಿರಸ್ಕಾರದಿಂದ ನೋಡಬಾರದು. ಗೈರು ಹಾಜರಾದವನ ಹೆಂಡತಿಗೆ ಪೋಷಣೆಯಿಲ್ಲದಿದ್ದರೆ, ಅವಳನ್ನು ಜ್ಞಾತಿಗಳು ಕೈ ಬಿಟ್ಟರೆ, ಅವಳು ತನಗಿಷ್ಟವಾದವನನ್ನು ತನ್ನನ್ನು ಸಾಕಲು ಶಕ್ತಿಯಿರುವವನನ್ನು ತನ್ನ ಗೋಳನ್ನು ಹೋಗ ಲಾಡಿಸುವವನನ್ನು ಅವಳು ಪುನರ್ ವಿವಾಹವಾಗಬಹುದು..''

ಮನುವಿನಂತಲ್ಲದೆ, ವಿವಾಹದ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೊಡಲು ಪ್ರತಿಯೊಂದು ಎಚ್ಚರವನ್ನು ವಹಿಸಲಾಗಿದೆ. ಇದು ಪತ್ನಿಗೆ ಕೊಡುವ ದತ್ತಿ ಮತ್ತು ಪೋಷಣೆಗೆ ಸಂಬಂಧಿಸಿದ ಅವಕಾಶಗಳನ್ನು ಕೌಟಿಲ್ಯನ ಅರ್ಥಶಾಸ್ತ್ರದಿಂದ ಉದ್ಧರಿಸುವುದರಿಂದ ಸ್ಪಷ್ಟವಾಗುತ್ತದೆ:

''ಜೀವನಾಧಾರದ ಸಾಧನಗಳು ಅಥವಾ ಆಭರಣಗಳನ್ನು ಸ್ತ್ರೀಯರ ಆಸ್ತಿಯೆಂದು ಪರಿಗಣಿಸಬೇಕು. ಎರಡು ಸಾವಿರಕ್ಕಿಂತ ಹೆಚ್ಚು ಬೆಲೆ ಬಾಳುವ ಜೀವನಾಧಾರ ಸಾಧನಗಳನ್ನು (ಅವಳ ಹೆಸರಿನಲ್ಲಿ) ದತ್ತಿಬಿಡತಕ್ಕದ್ದು. ಆಭರಣಗಳಿಗೆ ಮಿತಿಯಿಲ್ಲ. ಗೈರುಹಾಜರಾದ ತನ್ನ ಗಂಡ ತನ್ನ ಪೋಷಣೆಗೆ ವ್ಯವಸ್ಥೆ ಮಾಡದಿರುವಾಗ ಹೆಂಡತಿಯು ತನ್ನ ಮಗ, ಸೊಸೆ ಅಥವಾ ತನ್ನ ಪೋಷಣೆಗೆ ಈ ಸ್ವತ್ತನ್ನು ಉಪಯೋಗಿಸುವುದು ಅಪರಾಧವಲ್ಲ. ವಿಪತ್ತುಗಳಲ್ಲಿ ರೋಗರುಜಿನಗಳಲ್ಲಿ, ಕ್ಷಾಮ ಡಾಮರಗಳಲ್ಲಿ ಅಪಾಯಗಳ ನಿವಾರಣೆಯಲ್ಲಿ, ಹಾಗೂ ಧರ್ಮಕಾರ್ಯಗಳಲ್ಲಿ ಗಂಡ ಕೂಡ ಈ ಸ್ವತ್ತನ್ನು ಉಪಯೋಗಿಸಬಹುದು. ಅವಳಿಗಳನ್ನು ಪಡೆದಿರುವ ದಂಪತಿಗಳು ಪರಸ್ಪರ ಸಮ್ಮತಿಯಿಂದ ಈ ಸ್ವತ್ತನ್ನು ಅನುಭೋಗಿಸಿದರೆ ಯಾವ ಫಿರ್ಯಾದೂ ಇಲ್ಲ. ಮದುವೆಯ ಮೊದಲ ನಾಲ್ಕು ಬಗೆಯ ಆಚಾರಗಳಿಗನುಸಾರವಾಗಿ ವಿವಾಹವಾದರೂ ಮೂರು ವರ್ಷಗಳವರೆಗೆ ಈ ಸ್ವತ್ತನ್ನು ಅನುಭೋಗಿಸಿದರೆ ಯಾವ ಫಿರ್ಯಾದೂ ಇಲ್ಲ. ಆದರೆ ಗಾಂಧರ್ವ ಮತ್ತು ಅಸುರ ವಿವಾಹಗಳಲ್ಲಿ ಈ ಸ್ವತ್ತನ್ನು ಅನುಭೋಗಿಸಿದರೆ ಅದನ್ನು ಬಡ್ಡಿ ಸಮೇತ ಹಿಂದಿರುಗಿಸತಕ್ಕದ್ದು. ರಾಕ್ಷಸ ಮತ್ತು ಪೈಶಾಚವೆಂದು ಕರೆಯಲಾಗುವ ಅಂಥ ಮದುವೆಗಳಲ್ಲಿ ಈ ಸ್ವತ್ತು ಬಳಕೆಯಾದರೆ ಅದನ್ನು ಕಳ್ಳತನವೆಂದು ಪರಿಗಣಿಸಬೇಕು. ಹೀಗೆ ಮದುವೆಯ ಕರವನ್ನು ವಿವರಿಸಲಾಗಿದೆ.''

ಗಂಡ ತನ್ನನ್ನು ಹೊಡೆದು ಅಪಮಾನಗೊಳಿಸಿದರೆ ಹೆಂಡತಿಯು ನ್ಯಾಯಾಲಯದಲ್ಲಿ ನ್ಯಾಯವನ್ನು ಕೌಟಿಲ್ಯನ ಕಾಲದಲ್ಲಿ ಪಡೆಯಬಹುದಿತ್ತೆನ್ನುವುದು ಆಶ್ಚರ್ಯವನ್ನುಂಟು ಮಾಡುತ್ತದೆ.

ಒಟ್ಟಿನಲ್ಲಿ ಮನು ಪೂರ್ವ ಯುಗದಲ್ಲಿ ಸ್ತ್ರೀ ಸ್ವತಂತ್ರಳಾಗಿದ್ದಳು: ಹಾಗೂ ಪುರುಷನ ಸಮಾನ ಸಂಗಾತಿಯಾಗಿದ್ದಳು.

ಮನು ಏಕೆ ಅವಳನ್ನು ಅಧೋಗತಿಗಿಳಿಸಿದ ?

ಕೃಪೆ : ವಿಚಾರ ಸಾಹಿತ್ಯ ಮತ್ತು ಹೆಣ್ಣು. (ಸಂ. ಅನಸೂಯ ಕೇಂಬಳೆ)

ಸಾಧನೆಗೆ ಸ್ಫೂರ್ತಿ ತುಂಬಿದ ದಿನಗಳಿವು ಪ್ರಗತಿಯ ಪಥದಲ್ಲಿ ಕರ್ನಾಟಕ

- ಸಿ.ಇ.ಟಿ. ಸಮಸ್ಯೆಗೆ ಸಂಧಾನ ಮೂಲಕ ಪರಿಹಾರ. ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಕೇಂದ್ರ ವಿಧೇಯಕಗಾಗಿ ಆಗ್ರಹಿಸಿ ಪ್ರಧಾನಿ ಬಳಿ ಸರ್ವ ಪಕ್ಷಗಳ ನಿಯೋಗ, ರಾಜ್ಯದಲ್ಲಿ ಇದಕ್ಕಾಗಿ ಪ್ರತ್ಯೇಕ ಶಾಸನ.

  ವೃತ್ತಿ ಶಿಕ್ಷಣದ ಬೇಡಿಕೆಯನ್ನು ಬೀದರ್, ರಾಯಚೂರು, ಹಾಸನ, ಮಂಡ್ಯ ಮತ್ತು ಬೆಳಗಾವಿಯಲ್ಲಿ ಐದು ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಹಾಗೂ ಹುಬ್ಬಳ್ಳಿ, ಬಳ್ಳಾರಿ ಮತ್ತು ಮೈಸೂರಿನಲ್ಲಿ 3 ದಂತ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಚಿಂತನೆ.
- ಹೈದರಾಬಾದ್ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಆ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ 371ನೇ ವಿಧೇಯಕ್ಕೆ ತಿದ್ದುಪಡಿ ತರಲು ಸರ್ವಪಕ್ಷ ನಿಯೋಗದ ಮೂಲಕ ಕೇಂದ್ರದ ಮೇಲೆ ಒತ್ತಡ. ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಈ ವರ್ಷ ಒಟ್ಟಾರೆ ಬಜೆಟ್‌ನ ಶೇ. 54ರಷ್ಟು ಅನುದಾನ ಮೀಸಲು.
- ರೈತರಿಗೆ ಸಬ್ಸಿಡಿ ದರದಲ್ಲಿ ಬೀಜಗಳ ಪೂರೈಕೆ ರೂ. 68 ಕೋಟಿ ವೆಚ್ಚ
- ಬೆಂಗಳೂರಿನ ಅರ್ಕಾವತಿ ಬಡಾವಣೆಯಲ್ಲಿ 20,000 ನಿವೇಶನಗಳ ಹಂಚಿಕೆಗೆ ಕ್ರಮ.
- ಬೀದರಿನ ಪಶು ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳ ನೇಮಕ.
- ಕಾರ್ಯಪ್ರಗತಿಯಲ್ಲಿರುವ ಎಲ್ಲಾ ನೀರಾವರಿ ಕಾಮಗಾರಿಗಳು ಡಿಸೆಂಬರ್ 2005 ರೊಳಗಾಗಿ ಪೂರ್ಣ.
- ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಬಜೆಟ್ ಅನುದಾನದಲ್ಲಿ ರೂ. 412 ಕೋಟಿಯಿಂದ ರೂ. 840 ಕೋಟಿಗೆ ಹೆಚ್ಚಳ. ಬೆಳೆ ವಿಮೆಗಾಗಿ ರೂ. 241 ಕೋಟಿ ಮೀಸಲು.
- ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಆಶ್ವಾಸನೆ ನೀಡಿದ್ದಂತೆ ದುರ್ಬಲ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಪ್ರತಿ ಕುಟುಂಬಕ್ಕೆ ಪ್ರತಿ ಕೆ.ಜಿ.ಗೆ ರೂ. 3.00 ರಂತೆ 20 ಕೆ.ಜಿ. ಅಕ್ಕಿ ಮತ್ತು ಗೋಧಿ ಪೂರೈಕೆ.
- ವಾರ್ಷಿಕ ರೂ. 300 ಕೋಟಿ ಆದಾಯ ತರುತ್ತಿದ್ದ ಆನ್‌ಲೈನ್ ಲಾಟರಿ ಮತ್ತು ಮಟ್ಕಾಗಳನ್ನು ಜನಸಾಮಾನ್ಯರ ಹಿತದೃಷ್ಟಿಯಿಂದ ನಿಷೇಧ.
- 7ನೇ ತರಗತಿಯವರಿಗೆ ''ಅಕ್ಷರ ದಾಸೋಹ'' ಕಾರ್ಯಕ್ರಮದ ವಿಸ್ತರಣೆ. ರೂ. 260 ಕೋಟಿ ಅನುದಾನ. 25 ಲಕ್ಷ ಮಕ್ಕಳು ಫಲಾನುಭವಿಗಳು.
- ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಪ್ರಥಮ ಬಾರಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ.
- ಹಿಂದುಳಿದ ವರ್ಗಗಳ ಸ್ವಯಂ ಉದ್ಯೋಗಕ್ಕಾಗಿ ರೂ. 20 ಕೋಟಿ ವೆಚ್ಚದ ಶ್ರಮ ಶಕ್ತಿ ಯೋಜನೆ.
- ಮಂಗಳೂರಿನಲ್ಲಿ ರೂ. 25,000 ಕೋಟಿ ಮೌಲ್ಯದ ಪೆಟ್ರೋಕೆಮಿಕಲ್ಸ್ ಘಟಕ ಸ್ಥಾಪಿಸುವ ದಿಸೆಯಲ್ಲಿ ಒಎನ್‌ಜಿಸಿಯೊಂದಿಗೆ ಒಡಂಬಡಿಕೆ.
- ಮಂಗಳೂರು-ಹಾಸನ-ಬೆಂಗಳೂರು-ಚೆನ್ನೈ ಮಾರ್ಗದಲ್ಲಿ ಕೊಳವೆ ಮೂಲಕ ಅನಿಲ ಪೂರೈಕೆಗೆ ಯೋಜನೆ.
- ನಕ್ಸ್‌ಲೈಟ್ ಸಮಸ್ಯೆಗೆ ಮಾತುಕತೆ ಮೂಲಕ ಪರಿಹಾರಕ್ಕೆ ಯತ್ನ.

ಜನ ಮಾನಸಕ್ಕೆ ಪ್ರತಿ ದಿನ ಸ್ಪಂದನ

ಕರ್ನಾಟಕ ವಾರ್ತೆ.

ಸಾಹಸದ ಅನುವಾದ

'ಗಾನ್ ವಿತ್ ದ ವಿಂಡ್' (ಕಾದಂಬರಿ)
ಇಂಗ್ಲಿಷ್ ಮೂಲ : ಮಾರ್ಗರೆಟ್ ಮಿಶೆಲ್
ಕನ್ನಡಕ್ಕೆ : ಶ್ಯಾಮಲಾ ಮಾಧವ
ಪ್ರಕಾಶಕರು : ಅಂಕಿತ ಪುಸ್ತಕ
ಪುಟಗಳು : 600 ಬೆಲೆ : 250 ರೂ.

ವಿಶ್ವಸಾಹಿತ್ಯದಲ್ಲಿ ಒಂದು ಅಪೂರ್ವವಾದ ಕೃತಿ ಮಾರ್ಗರೆಟ್ ಮಿಶೆಲ್ ಅವರ 'ಗಾನ್ ವಿತ್ ದ ವಿಂಡ್'. 1936ರಲ್ಲಿ ಮೊದಲು ಪ್ರಕಟವಾದ ಈ ಕೃತಿ, ಅತ್ಯಂತ ಜನಪ್ರಿಯವಾಗಿದೆ. ಇದುವರೆಗೆ ಇಂಗ್ಲಿಷ್ ಭಾಷೆಯಲ್ಲಿ ನಾಲ್ಕು ಕೋಟಿ ಪ್ರತಿಗಳು ಮಾರಾಟವಾಗಿವೆ. 1937ರಲ್ಲಿ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿ ಪಡೆದ ಈ ಕಾದಂಬರಿ ನಂತರ 1939ರಲ್ಲಿ ಚಲನಚಿತ್ರವಾಗಿ ದಾಖಲೆ ಸ್ಥಾಪಿಸಿತು. ಈ ಒಂದೇ ಒಂದು ಕಾದಂಬರಿಯ ಮೂಲಕ ಮಾರ್ಗರೆಟ್ ಮಿಶೆಲ್ ವಿಶ್ವವಿಖ್ಯಾತಳಾದಳು. ಇಪ್ಪತ್ತೊಂಬತ್ತು ದೇಶಗಳಲ್ಲಿ ಮತ್ತು ಇಪ್ಪತ್ತಾರು ಭಾಷೆಗಳಲ್ಲಿ ಪ್ರಕಟವಾದ ಈ ಬೃಹತ್ ಕೃತಿಯನ್ನು ಕನ್ನಡಕ್ಕೆ ತಂದವರು ಮುಂಬಯಿಯ ಲೇಖಕಿ ಶ್ರೀಮತಿ ಶ್ಯಾಮಲಾ ಮಾಧವ್. ಒಂದು ವರ್ಷ ಕಾಲ ಅತ್ಯಂತ ಆಸಕ್ತಿಯಿಂದ, ಶ್ರದ್ಧೆಯಿಂದ, ಪ್ರೀತಿಯಿಂದ ಇವರು ಅನುವಾದಿಸಿದ ಕೃತಿ, ಅದರ ಬೃಹತ್ ಗಾತ್ರದಿಂದಾಗಿ ಬೆಳಕು ಕಾಣಲು ಹತ್ತು ವರ್ಷಗಳನ್ನೇ ತೆಗೆದುಕೊಂಡಿತು. ಅಂದಹಾಗೆ ಮೂಲ ಲೇಖಕಿ ಮಾರ್ಗರೆಟ್ ಮಿಶೆಲ್, ಕೃತಿ ರಚಿಸಿದ ಹತ್ತು ವರ್ಷಗಳ ಬಳಿಕವೇ 'ಗಾನ್ ವಿತ್ ದ ವಿಂಡ್' ಬೆಳಕು ಕಂಡಿತ್ತು!

ಸುಮಾರು ಏಳು ದಶಕಗಳ ಹಿಂದೆ ಪ್ರಕಟವಾಗಿದ್ದ ಈ ಕೃತಿ ಇಂದಿಗೂ ಪ್ರಸ್ತುತವಾಗಿರುವುದೇ ಇದರ ಮಹತ್ವವಾಗಿದೆ. ಹತ್ತೊಂಬತ್ತನೇ ಶತಮಾನದ ಮಧ್ಯಕಾಲದಲ್ಲಿ ಅಮೆರಿಕಾದ ದಕ್ಷಿಣ ಸಂಸ್ಥಾನಗಳಿಂದ ಜೀತ ಪದ್ಧತಿಯನ್ನು ತೊಲಗಿಸುವ ಪಣತೊಟ್ಟ ಅಮೆರಿಕಾದ ಅಧ್ಯಕ್ಷರಾದ ಅಬ್ರಹಾಂ ಲಿಂಕನ್ನರ ಪ್ರಯತ್ನಕ್ಕೆದುರಾಗಿ ನಿಂತ ದಕ್ಷಿಣದ ಹದಿಮೂರು ಪ್ರಾಂತ್ಯಗಳ ಸಂಘಟನೆ, ಯುದ್ಧದ ಬೀಸುಗಾಳಿಗೆ ಸಿಲುಕಿ ಮೂರಾಬಟ್ಟೆಯಾಗುವ ಕಥಾನಕ 'ಗಾನ್ ವಿತ್ ದ ವಿಂಡ್'ನ ಆರಂಭ. ಪ್ರಬಲವಾದ ಈ ಸುಳಿಗಾಳಿಗೀಡಾದ ಆ ದಕ್ಷಿಣ ನಾಡ ಸ್ಕಾರ್ಲೆಟಳ ಚಿತ್ರಣದೊಂದಿಗೆ ಕಾದಂಬರಿ ತೆರೆದುಕೊಳ್ಳುತ್ತದೆ. ಅಂದಿನ ಅಂತರ್ಯುದ್ಧ, ಬರ, ಬಡತನ, ಕೊಲೆ, ಸುಲಿಗೆಗಳು, ಮತ್ತೆ ನಡೆದ ಪುನರುಜ್ಜೀವನ - ಇವೆಲ್ಲವುಗಳ ವಿಹಂಗಮ ನೋಟವನ್ನು ಈ ಕಾದಂಬರಿ ಓದುಗರಿಗೆ ನೀಡುತ್ತದೆ.

ಅಮಿತ ಜೀವನೋತ್ಸಾಹದ, ಬಯಸಿದ್ದನ್ನು ಪಡೆದೇ ತೀರುವ ಛಲದ, ಇಚ್ಛೆ ಹಾಗೂ ಪ್ರಾಪ್ತಿ ಎರಡೂ ಭಿನ್ನ ವಿಷಯಗಳು ಎಂಬುದನ್ನೇ ಅರಿಯದ ಹದಿಹರೆಯದ ಮೋಹಕ ಚೆಲುವೆ ಸ್ಕಾರ್ಲೆಟ್ ಕಾದಂಬರಿಯ ಜೀವಾಳ. ಈ ಹುಡುಗಿಯ ರಮ್ಯಲೋಕ ಯುದ್ಧದ ಕಾವಿಗೆ ಕರಗಿ ಕುಸಿದಾಗ, ಆ ಬೂದಿಯಿಂದೆದ್ದು ಬಂದು, ಇನ್ನಿಲ್ಲದ ಸ್ಥೈರ್ಯ, ಛಲದೊಂದಿಗೆ ಪುನಃ ತನ್ನ ಮನೆ, ಭೂಮಿಯನ್ನು ಎತ್ತಿ ನಿಲ್ಲಿಸುವ ಸ್ಕಾರ್ಲೆಟಳ ಸಾಹಸಗಾಥೆಯೊಂದಿಗೆ ಆಕೆ ಕಳೆದುಕೊಳ್ಳುವ ಜೀವನ ಮೌಲ್ಯಗಳ ಕರುಣಕತೆಯನ್ನೂ ಈ ಕಾದಂಬರಿ ಹೇಳುತ್ತದೆ.

'ಗಾನ್ ವಿತ್ ದ ವಿಂಡ್' ರಮ್ಯ ಕತೆಯಂತೆನಿಸಿದರೂ, ಅದು ಸಾರುವ ಪ್ರಬಲ ಯುದ್ಧ ವಿರೋಧೀ ಸಂದೇಶ ಕೃತಿಯನ್ನು ಸಮಕಾಲೀನವಾಗಿಸುತ್ತದೆ. 'ಕಾದಾಡುವವರ ಪಾಲಿಗೆ ಎಲ್ಲ ಯುದ್ಧಗಳೂ ಪವಿತ್ರವೇ ! ಯುದ್ಧಗಳನ್ನು ಆರಂಭಿಸುವವರು ಅವನ್ನು ಪವಿತ್ರವಾಗಿಸದಿದ್ದಲ್ಲಿ ಹೋರಾಡುವ ಮೂರ್ಖತನವನ್ನು ತೋರುವವರಾರು ?' ಎನ್ನುವ ಮಾತುಗಳು ಸಾರ್ವಕಾಲಿಕ ಸತ್ಯ.

ಇಂತಹ ಒಂದು ಮಹತ್ವದ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ಶ್ಯಾಮಲಾ ಮಾಧವ್ ಅವರ ಸಾಹಸ ದೊಡ್ಡದು. ಇವರ ಅನುವಾದಕ್ಕೆ ಕರ್ನಾಟಕ ಲೇಖಕಿಯರ ಸಂಘದ 'ಎಚ್.ವಿ. ಸಾವಿತ್ರಮ್ಮ ದತ್ತನಿಧಿ' ಪ್ರಶಸ್ತಿ ಲಭಿಸಿದೆ. 'ಅಚಲ' ಲೇಖಕಿಯನ್ನು ಅಭಿನಂದಿಸುತ್ತದೆ.



ಸಂವಿಧಾನದಲ್ಲಿ ಮಹಿಳೆಯರಿಗೆ ವಿಶೇಷ ಹಕ್ಕುಗಳು

- ಗೀತಾ ಕೃಷ್ಣಮೂರ್ತಿ

ಬ್ರಿಟಿಷರ ಆಳ್ವಿಕೆಯಿಂದ ಮುಕ್ತವಾದ ಭಾರತವನ್ನು ಸರ್ವಶಕ್ತ ಸಮಾಜವಾದೀ ಜಾತ್ಯತೀತ ಸ್ವತಂತ್ರ ಪ್ರಜಾಸತ್ತಾತ್ಮಕ ಗಣತಂತ್ರ ರಾಷ್ಟ್ರವನ್ನಾಗಿ ರೂಪಿಸುವುದಕ್ಕಾಗಿ ರಾಷ್ಟ್ರವು ತನಗೆ ತಾನೇ ಸಮರ್ಪಿಸಿಕೊಂಡ ಭಾರತ ಸಂವಿಧಾನವು, ಇಡೀ ವಿಶ್ವದಲ್ಲಿಯೇ ಅತ್ಯುತ್ಕೃಷ್ಟ ಸ್ವಯಂಪೂರ್ಣ ಸಂವಿಧಾನವೆಂಬ ಪ್ರಶಂಸೆಗೆ ಪಾತ್ರವಾಗಿದೆ. ಸಂವಿಧಾನದ ಪ್ರಸ್ತಾವನೆ ಹೀಗಿದೆ :

"ಭಾರತದ ಸಮಸ್ತ ನಾಗರಿಕರಾದ ನಾವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಅಭಿವ್ಯಕ್ತಿ ನಂಬಿಕೆ, ಧರ್ಮ ಮತ್ತು ಉಪಾಸನಾ ಸ್ವಾತಂತ್ರ್ಯ ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆ - ಭಾರತೀಯ ನಾಗರಿಕರಿಗೆ ದೊರೆಯುವಂತೆ ಮಾಡಲು, ವ್ಯಕ್ತಿ ಗೌರವ ಹಾಗೂ ರಾಷ್ಟ್ರದ ಏಕತೆಯನ್ನು ಖಚಿತಪಡಿಸುವಂಥ ಭ್ರಾತೃ ಭಾವನೆಯನ್ನು ಎಲ್ಲರಲ್ಲೂ ಬೆಳೆಸುವ ದೃಢ ಸಂಕಲ್ಪದಿಂದ ಸಂವಿಧಾನವನ್ನು ಅಂಗೀಕರಿಸಿ, 1949ರ ನವೆಂಬರ್ 26ರಂದು ನಮ್ಮ ಸಂಸತ್ತಿನಲ್ಲಿ ಅಧಿನಿಯಮಿಸಿ ದೇಶಕ್ಕೆ ಅರ್ಪಿಸಿಕೊಂಡಿದ್ದೇವೆ."

ಸ್ತ್ರೀ-ಪುರುಷ ಸಮಾನತೆಯ ಪರಿಕಲ್ಪನೆಯನ್ನು ಅಂತರ್ಗತ ಗೊಳಿಸಿಕೊಂಡಿರುವ ನಮ್ಮ ಸಂವಿಧಾನ ಮಹಿಳೆಯರಿಗೆ ಹೊಸ ದಿಗಂತವನ್ನು ತೆರೆಯಿತು. ಮಹಿಳಾ ವಿಮೋಚನೆಯ ಸಮಸ್ಯೆಯ ಸಾಮಾಜಿಕ ಆಯಾಮದ ಅರಿವು ನಮ್ಮ ಸಂವಿಧಾನ ಶಿಲ್ಪಿಗಳಿಗಿತ್ತು. ಅಲ್ಲದೆ ರಾಷ್ಟ್ರದ ಅಭಿವೃದ್ಧಿಗೆ ಮಹಿಳೆಯರು ಪುರುಷರಿಗೆ ಸರಿಸಮನಾಗಿ ಭಾಗವಹಿಸುವುದು ಅತ್ಯಗತ್ಯ ಎಂಬುದನ್ನು ಅವರು ಮನಗಂಡಿದ್ದರು. ಸ್ತ್ರೀ-ಪುರುಷ ತಾರತಮ್ಯವನ್ನು ಹೋಗಲಾಡಿಸ ಬೇಕಾದರೆ ಹಾಗೂ ಮಾನವ ಹಕ್ಕುಗಳ ಚಲಾವಣೆಗೆ ಅವಕಾಶ ಕಲ್ಪಿಸಬೇಕಾದರೆ, ಮಹಿಳೆಯರ ಶಿಕ್ಷಣ ಹಾಗೂ ಆರ್ಥಿಕ ಭದ್ರತೆಗೆ ಅವಕಾಶ ಒದಗಿಸುವುದು ಹಾಗೂ ಸಾಮಾಜಿಕ ಅನ್ಯಾಯ ಹಾಗೂ ಶೋಷಣೆಯಿಂದ ಅವರನ್ನು ರಕ್ಷಿಸುವುದು ಅತ್ಯಗತ್ಯವಾಗಿತ್ತು. ಈ ಧ್ಯೇಯದಿಂದ ನಮ್ಮ ಸಂವಿಧಾನ ಮೂರು ಮುಖ್ಯ ಕ್ರಮಗಳನ್ನು ಕೈಗೊಂಡಿದೆ. ಮೊದಲನೆಯದಾಗಿ ಲಿಂಗದ ಆಧಾರದ ಮೂಲಕ ವಾದ ಯಾವುದೇ ತಾರತಮ್ಯಗಳನ್ನು ನಿಷೇಧಿಸುವುದು ; ಎರಡ ನೆಯದಾಗಿ, ಮಹಿಳೆಯರ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಬಗ್ಗೆ ರಾಜ್ಯ ವಿಶೇಷ ಕಾಳಜಿ ವಹಿಸುವುದಕ್ಕೆ ಸಾಧ್ಯವಾಗುವಂತೆ ಮಹಿಳೆಯರಿಗಾಗಿ ವಿಶೇಷ ಉಪಬಂಧಗಳನ್ನು ರಚಿಸಲು ಅಧಿಕಾರ ನೀಡುವುದು ; ಮತ್ತು ಕೊನೆಯದಾಗಿ, ಮಹಿಳೆಯರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ನಿರ್ದೇಶನಗಳನ್ನು ನೀಡುವ ನಿರ್ದೇಶನ ತತ್ವಗಳನ್ನು ರೂಪಿಸುವುದು.

ಮಾನವ ನಾಗರಿಕತೆಯ ಹಾಗೂ ಸಂಸ್ಕೃತಿಯ ನಿಜವಾದ ಪ್ರಗತಿಯೆಂದರೆ, ಸ್ತ್ರೀ ಪುರುಷರನ್ನು ಪರಿಪೂರ್ಣ ಅಸ್ತಿತ್ವವಿರುವ ವ್ಯಕ್ತಿಗಳನ್ನಾಗಿ ಪರಿಗಣಿಸುವುದರ ಮಹತ್ವವನ್ನು ಹಾಗೂ ರೀತಿ ನೀತಿಗಳನ್ನು ಗುರುತಿಸುವತ್ತ ಹೆಜ್ಜೆಯಿಡುವುದು. ಆದರೆ ದುರದೃಷ್ಟವಶಾತ್ ಆ ದಿಶೆಯಲ್ಲಿ ಸಕ್ರಿಯ ಪ್ರಯತ್ನಗಳು ನಡೆದಿಲ್ಲ.

ವೇದ ಕಾಲದ ಪ್ರಾರಂಭದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಜೀವನದಲ್ಲಿ ಮಹಿಳೆ ಪುರುಷರೊಂದಿಗೆ ಸರಿ ಸುಮಾರು ಸಮಾನ ಸ್ಥಾನಮಾನವನ್ನು ಹೊಂದಿದ್ದಳು. ಮಹಿಳೆಯರನ್ನು ಸಮಾಜದ ಗೌರವಾನ್ವಿತ ವ್ಯಕ್ತಿಗಳನ್ನಾಗಿ ಪರಿಗಣಿಸಲಾಗುತ್ತಿತ್ತು. ಆದರೆ, ಆ ತರುವಾಯ ಮಹಿಳೆಯ ಸ್ಥಾನಮಾನಕ್ಕೆ ಚ್ಯುತಿ ಉಂಟಾಗತೊಡ ಗಿತು. ಇದು ವಿಶ್ವದ ಎಲ್ಲ ನಾಗರಿಕತೆಗಳಲ್ಲೂ ಉಂಟಾಗಿರುವ ಬದಲಾವಣೆ. ಸ್ಮೃತಿಗಳ ಕಾಲದಲ್ಲಿ ಮತ್ತು ತರುವಾಯದ ಅವಧಿ ಯಲ್ಲಿ ಮಹಿಳೆಯ ಸ್ಥಾನಮಾನದಲ್ಲಿ ಮತ್ತಷ್ಟು ಅವನತಿ ಯುಂಟಾಯಿತು. ಸ್ಮೃತಿ ಯುಗದ ಮುಖವಾಣಿಯಂತಿರುವ ಮನು ಸ್ತ್ರೀಯರಿಗೆ ಸ್ವಾತಂತ್ರ್ಯದ ಹಕ್ಕಿಲ್ಲ ಎಂದ. "ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಪತಿಯೂ, ಮುಪ್ಪಿನಲ್ಲಿ ಮಕ್ಕಳೂ ಸ್ತ್ರೀಯರ ರಕ್ಷಣೆಯ ಭಾರ ಹೊರುವರು. ಸ್ತ್ರೀಗೆ ಸ್ವಾತಂತ್ರ್ಯದ ಹಕ್ಕಿಲ್ಲ" ಎಂದ. ಇದು ಅಂದಿನ ಸ್ತ್ರೀಯ ಸ್ಥಾನಮಾನದ ಪ್ರತಿಬಿಂಬವೂ ಹೌದು. ಆ ನಂತರ ಮಹಿಳೆಯರು ವೇದ ವ್ಯಾಸಂಗಕ್ಕೆ ಅರ್ಹರಲ್ಲ ಎಂದು ಘೋಷಿಸಲಾಯಿತು. ಇದಕ್ಕೆ ಕಾರಣ ಅವರ ಅನಕ್ಷರತೆ, ಸಮಾಜದಲ್ಲಿ ಅವರ ಸ್ಥಾನಮಾನ ಹಾಗೂ ಪ್ರಾಮುಖ್ಯತೆಯ ಬಗೆಗಿದ್ದ ಅಜ್ಞಾನ. ಶಾಸ್ತ್ರಗ್ರಂಥಗಳಲ್ಲಿ ಅವಳಿಗೆ ದೇವತೆಯ ಸ್ಥಾನ ನೀಡಿದರೂ, ಪತಿಯ ಅರ್ಧಾಂಗಿ ಯೆಂದೂ ಗೌರವಿಸಿದರೂ ವಾಸ್ತವದಲ್ಲಿ ಅವಳ ಸಾಮಾಜಿಕ ಸ್ಥಾನಮಾನ ಕ್ಷೀಣಿಸುತ್ತಲೇ ಹೋಯಿತು. ಸತಿ, ಪರದಾ, ಬಾಲ್ಯವಿವಾಹ, ವಿಧವಾ ಪುನರ್ವಿವಾಹ ನಿಷೇಧ, ವರದಕ್ಷಿಣೆಗಳಂಥ ಸಾಮಾಜಿಕ ಪಿಡುಗುಗಳು ಈ ಅವಧಿಯಲ್ಲಿ ಆಳವಾಗಿ ಬೇರೂರಿದವು. ಹಿಂದಿನ ಅಧ್ಯಾಯದಲ್ಲಿ ನೋಡಿದಂತೆ ರಾಜಾರಾಮ್ ಮೋಹನರಾಯ್, ಸ್ವಾಮಿ ದಯಾನಂದ ಸರಸ್ವತಿ, ಈಶ್ವರಚಂದ್ರ ವಿದ್ಯಾಸಾಗರ ಮುಂತಾದ ಸಮಾಜ ಸುಧಾರಕರು ಈ ಪಿಡುಗುಗಳ ನಿವಾರಣೆಗೆ ಸತತವಾಗಿ ಹೋರಾಡ ಬೇಕಾಯಿತು. ಅದಕ್ಕೆ ಪೂರಕವಾದ ಕಾನೂನುಗಳನ್ನು ರಚಿಸು ವಂತೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಬೇಕಾಯಿತು. ಆದರೆ ರಾಜಕೀಯ ಸಂಕಲ್ಪ ಹಾಗೂ ಸಾಮಾಜಿಕ ಪ್ರಜ್ಞೆಯ ಕೊರತೆ ಯಿಂದಾಗಿ ಈ ಕಾನೂನುಗಳು ಪರಿಣಾಮಕಾರಿಯಾಗಲಿಲ್ಲ, ಮಹಿಳೆಯ ಸ್ಥಾನಮಾನವನ್ನು ಸುಧಾರಿಸುವಲ್ಲಿ ಅಷ್ಟೇನೂ ಸಹಕಾರಿಯಾಗಲಿಲ್ಲ, ಇದರ ಪರಿಣಾಮವಾಗಿ, ಮಾನವ

ಜನಾಂಗದ ಅರ್ಧದಷ್ಟಿರುವ ಮಹಿಳೆಯರು ಪುರುಷರ ಮೇಲೆ ಅವಲಂಬಿತರಾಗಿಯೇ ಉಳಿಯಬೇಕಾಯಿತು ಮತ್ತು ಮಹಿಳೆಯು ಪುರುಷನ ಚರಾಸ್ತಿ ಅಥವಾ ಗುಲಾಮಳೆನ್ನುವ ಮಟ್ಟಕ್ಕೆ ಇಳಿಸಲಾಯಿತು.

ಮಹಿಳೆ ಕಾನೂನು ವೃತ್ತಿಯನ್ನು ಕೈಗೊಳ್ಳದಂತೆ ಅವಳನ್ನು ಹೊರತು ಪಡಿಸಿದುದನ್ನು 1873ರಲ್ಲಿ ಅಮೇರಿಕಾದ ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿಯಿತು. ಅದಕ್ಕೆ ಅದು ನೀಡಿದ ಕಾರಣ "ಪತ್ನಿಯಾಗಿ ಮತ್ತು ತಾಯಿಯಾಗಿ ತನ್ನ ಸರ್ವೋತ್ಕೃಷ್ಟ ಕರ್ತವ್ಯಗಳನ್ನು ನಿರ್ವಹಿಸುವುದು ಮಹಿಳೆಯರ ಗುರಿ ಮತ್ತು ಆದರ್ಶ" ಎಂಬುದು.

ಆದರೆ ಆ ತರುವಾಯ ಪುರುಷರ ಮನೋಭಾವದಲ್ಲಿ ಹಾಗೂ ಮಹಿಳೆಯರ ಧೋರಣೆಯಲ್ಲಿ ಅದೆಷ್ಟೋ ಬದಲಾವಣೆಗಳಾಗಿ ಹೋಗಿವೆ. ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಸಮಾನ ಅವಕಾಶಗಳನ್ನು ಕಲ್ಪಿಸುವುದೇ ಇದಕ್ಕೆ ಸಾಕ್ಷಿ.

ಸಂವಿಧಾನದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಅನುಚ್ಛೇದಗಳೆಂದರೆ :-

1) ಸಮಾನತೆಯ ಹಕ್ಕು (14, 15 ಮತ್ತು 16ನೇ ಅನುಚ್ಛೇದ)
2) ಶೋಷಣೆಯ ವಿರುದ್ಧ ಹಕ್ಕು (23ನೇ ಅನುಚ್ಛೇದ)
3) ನಿರ್ದೇಶನ ತತ್ವಗಳು (39 (ಎ) (ಡಿ) ಮತ್ತು (ಇ) ಹಾಗೂ 42ನೇ ಅನುಚ್ಛೇದಗಳು)
4) ಮೂಲಭೂತ ಕರ್ತವ್ಯಗಳು (51 ಎ (ಇ) ಅನುಚ್ಛೇದ)
5) ಚುನಾವಣೆಗಳು (325ನೇ ಅನುಚ್ಛೇದ)

ನಮ್ಮ ಸಂವಿಧಾನ ಶಿಲ್ಪಿಗಳು ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಹಾಗೂ ಸಮಾನತೆಯನ್ನು ನೀಡಿದರು. ಇವುಗಳ ಉದ್ದೇಶ ಮಹಿಳೆಯ ಅಭಿವೃದ್ಧಿ. ಆದರೆ ಮಹಿಳೆಯರಿಗಾಗಿ ಇರುವ ಉದಾರ ತತ್ವಗಳ ದುರುಪಯೋಗವನ್ನು ತಡೆಯುವುದು ಹಾಗೂ ಶೋಷಣೆಯಿಂದ ಅವರಿಗೆ ರಕ್ಷಣೆಯನ್ನೊದಗಿಸುವುದೂ ಅಷ್ಟೇ ಮುಖ್ಯವಾದುದು ಎಂಬುದನ್ನು ಅವರು ಮನಗಂಡಿದ್ದರು. ಆದ್ದರಿಂದ ಮಹಿಳೆಯ ವಿಷಯದಲ್ಲಿ, ಆಕೆ ಸ್ತ್ರೀ ಎಂಬ ಕಾರಣ ಮಾತ್ರಕ್ಕೆ ತಾರತಮ್ಯವೆಸಗದಂತೆ ರಕ್ಷಣಾ ಅನುಚ್ಛೇದಗಳನ್ನು ಸೇರಿಸಿದರು. ಸಮಾನತೆಯ ಅನುಚ್ಛೇದವನ್ನು ಸೇರಿಸಿದ್ದಲ್ಲದೇ ಮತ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳದ ಆಧಾರದ ಮೇಲೆ ಯಾವುದೇ ತಾರತಮ್ಯವಾಗುವುದನ್ನು ನಿಷೇಧಿಸಲಾಯಿತು. ಇದೆಲ್ಲದರ ಜೊತೆಗೆ, ಕೆಲವೊಂದು ವಿಶೇಷ ರಕ್ಷಣೆಗಳನ್ನು ಒದಗಿಸಿದ ಹೊರತು ಮಹಿಳೆಯ ಅಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಮನಗಂಡು ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷ ಉಪಬಂಧಗಳನ್ನು ಮಾಡಲು ರಾಜ್ಯಗಳಿಗೆ ಅಧಿಕಾರ ನೀಡಲಾಯಿತು. ಹೀಗೆ ನಮ್ಮ ಸಂವಿಧಾನ ರಚನಾಕಾರರು ಮಹಿಳೆಗೆ ಸಮಾಜೋ-ಆರ್ಥಿಕ ನ್ಯಾಯ ಒದಗಿಸಲು ಸಾಕಷ್ಟು ಎಚ್ಚರಿಕೆಯನ್ನು ವಹಿಸಿದ್ದಾರೆ.

ಎಲ್ಲ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ದೊರೆಯುವಂಥ ಸಾಮಾಜಿಕ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವುದು, ಆ ಮೂಲಕ ಅವರ ಅಭಿವೃದ್ಧಿಗೆ ಕಾರಣವಾಗುವುದು ಪ್ರತಿಯೊಂದು ರಾಜ್ಯ ಸರ್ಕಾರದ ಕರ್ತವ್ಯವಾಗಿರುತ್ತದೆ. ಸಂವಿಧಾನದ 39ನೇ ಅನುಚ್ಛೇದದಲ್ಲಿ -

ಎ) ತಮ್ಮ ಜೀವನೋಪಾಯಕ್ಕಾಗಿ ತಕ್ಕಷ್ಟು ಸಾಧನಗಳನ್ನು ಸ್ತ್ರೀ ಪುರುಷರು ಸಮಾನವಾಗಿ ಪಡೆಯಲು ಅನುಕೂಲವಾಗುವಂತೆ ;

ಬಿ) ಸ್ತ್ರೀ ಪುರುಷರಿಬ್ಬರಿಗೂ ಸಮಾನ ಶ್ರಮಕ್ಕೆ ಸಮಾನ ವೇತನ ದೊರೆಯುವಂತೆ ;

ಸಿ) ಸ್ತ್ರೀ ಪುರುಷ ಕೆಲಸಗಾರರ ಆರೋಗ್ಯ ಮತ್ತು ಶಕ್ತಿಯ ಹಾಗೂ ಮಕ್ಕಳ ವಯಸ್ಸಿನ ದುರುಪಯೋಗವಾಗದಿರುವಂತೆ ಮತ್ತು ನಾಗರಿಕರು ತಮ್ಮ ಆರ್ಥಿಕ ಅವಶ್ಯಕತೆಯಿಂದಾಗಿ ತಮ್ಮ ವಯಸ್ಸಿಗೆ ಅಥವಾ ಶಕ್ತಿಗೆ ತಕ್ಕಂತಿಲ್ಲದ ಕಸಬುಗಳಿಗೆ ಪ್ರವೇಶಿಸದಂತೆ ನೋಡಿಕೊಳ್ಳಲು ರಾಜ್ಯ ತನ್ನ ಕಾರ್ಯನೀತಿ ತತ್ವಗಳನ್ನು ರೂಪಿಸಿಕೊಳ್ಳುವ ಅಧಿಕಾರ ನೀಡುವ ಉಪಬಂಧ ಕಲ್ಪಿಸಲಾಗಿದೆ.

42ನೇ ಅನುಚ್ಛೇದದ ಮೂಲಕ, ಕೆಲಸ ಮಾಡಲು ಅನುಕೂಲಕರ ಹಾಗೂ ನ್ಯಾಯೋಚಿತ ಪರಿಸರವನ್ನು ಹಾಗೂ ಪ್ರಸೂತಿ ಸೌಲಭ್ಯವನ್ನು ಕಲ್ಪಿಸಿಕೊಡುವ ಜವಾಬ್ದಾರಿಯನ್ನು ರಾಜ್ಯಕ್ಕೆ ವಹಿಸಿಕೊಡಲಾಗಿದೆ.

ಇದೆಲ್ಲದರ ಜೊತೆ ಮಹಿಳೆಯ ಘನತೆಗೆ ಅಪಮಾನಕರವಾದ ಆಚರಣೆಗಳನ್ನು ತ್ಯಜಿಸುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯ ಎಂದೂ ವಿಧಿಸಲಾಗಿದೆ.

ಸಂವಿಧಾನದ 325ನೇ ಅನುಚ್ಛೇದದಲ್ಲಿ, ಯಾವನೇ ವ್ಯಕ್ತಿ ತನ್ನ ಮತ, ಮೂಲವಂಶ, ಜಾತಿ ಅಥವಾ ಲಿಂಗದ ಆಧಾರದ ಮೇಲೆ ಚುನಾವಣೆ ಪಟ್ಟಿಯಲ್ಲಿ ಸೇರ್ಪಡೆಯಾಗಲು ಅನರ್ಹನಾಗತಕ್ಕ ದ್ದಲ್ಲ ಅಥವಾ ವಿಶೇಷ ಚುನಾವಣಾ ಪಟ್ಟಿಗೆ ಸೇರ್ಪಡೆಯಾಗಲು ವಿಶೇಷ ಅರ್ಹತೆಯನ್ನು ಪಡೆಯುವುದಿಲ್ಲ ಎಂಬುದಾಗಿ ಉಪಬಂಧಿಸಲಾಗಿದೆ.

ನಮ್ಮ ಸಂವಿಧಾನದಲ್ಲಿ 6 ಸ್ಥಳಗಳಲ್ಲಿ ಮಾತ್ರ 'ಸ್ತ್ರೀಯರು' ಎಂಬ ಉಲ್ಲೇಖವಿದೆ. ಉಳಿದಂತೆ, ಎಲ್ಲೆಡೆಗಳಲ್ಲೂ ಪ್ರಜೆಗಳು, ವ್ಯಕ್ತಿಗಳು ಎಂದೇ ಉಲ್ಲೇಖಿಸಲಾಗಿದೆ. ಈ ಪದಗಳ ಅರ್ಥ ವ್ಯಾಪ್ತಿಯಲ್ಲಿ ಸ್ತ್ರೀಯರೂ ಸೇರಿದ್ದಾರೆ ಎಂಬುದು ನಿರ್ವಿವಾದ.

ಭಾರತ ಸಂವಿಧಾನದ ಮೂಲಕ ಸ್ತ್ರೀಯರಿಗೆ ನೀಡಲಾದ ಮೂಲಭೂತ ಹಕ್ಕುಗಳ ಪೈಕಿ ಸಮಾನತೆಯ ಹಕ್ಕು ಎಲ್ಲಕ್ಕಿಂತ ಮುಖ್ಯವಾದುದು. ಸ್ತ್ರೀ ಪುರುಷ ಸಮಾನತೆಯ ಪ್ರಶ್ನೆಯನ್ನೊಳಗೊಂಡ ಮುಖ್ಯವಾದ ಹಾಗೂ ಗಮನ ಸೆಳೆದ ಮೊಕದ್ದಮೆಯೆಂದರೆ ಏರ್ ಇಂಡಿಯಾ-ವಿ-ನರ್ಗೀಸ್ ಮಿರ್ಜಾ ಪ್ರಕರಣ. ಮಹಿಳೆಯ ಸಮಾನತೆಯ ಹಕ್ಕನ್ನು ಸ್ಪಷ್ಟವಾಗಿ ನಿರೂಪಿಸಿದ ಗಗನಸಖಿಯ ಈ ಪ್ರಕರಣ ಅತ್ಯಂತ ಕುತೂಹಲಕಾರಿ.

1981ರಲ್ಲಿ ಸರ್ವೋಚ್ಚ ನ್ಯಾಯಾಲಯ ಈ ಪ್ರಕರಣದಲ್ಲಿ ನೀಡಿದ ತೀರ್ಪು ಮಹಿಳೆಗೆ ಸಮಾನತೆಯ ಹಕ್ಕನ್ನು ನೀಡುವಲ್ಲಿ ಒಂದು ಮೈಲಿಗಲ್ಲಾಯಿತು.

ಅನೇಕ ಗಗನಸಖಿಯರು ತಮಗೆ ಅನ್ವಯವಾಗುವ ಸೇವಾ ನಿಯಮಗಳು ಪುರುಷ ಪ್ರಭುತ್ವವುಳ್ಳವು ಹಾಗೂ ತಾರತಮ್ಯ ಸ್ವರೂಪದ್ದಾಗಿವೆಯೆಂದು ವಾದಿಸಿ ನ್ಯಾಯಾಲಯದಲ್ಲಿ ಅವರ ಕಾನೂನು ಮಾನ್ಯತೆಯನ್ನು ಪ್ರಶ್ನಿಸಿದರು.

ಏರ್ ಇಂಡಿಯಾ ನಿಗಮ ಅಧಿನಿಯಮ, 1953ರ ಅಡಿಯಲ್ಲಿ ಅದರ ಮಹಿಳಾ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಈ ಮುಂದಿನ ನಿಯಮಗಳನ್ನು ವಿಧಿಸಲಾಗಿತ್ತು;

1) ಗಗನಸಖಿಯರು ಕೆಲಸಕ್ಕೆ ಸೇರಿದ ನಾಲ್ಕು ವರ್ಷಗಳ ಕಾಲ ಮದುವೆಯಾಗಬಾರದು ;

2) ಅವರು ಗರ್ಭಿಣಿಯರಾದರೆ ಕೆಲಸದಿಂದ ತೆಗೆದು ಹಾಕಲಾಗುತ್ತದೆ ;

3) ಅವರು 35 ವರ್ಷಗಳಿಗೆ ನಿವೃತ್ತಿ ಹೊಂದಬೇಕು. ಆದರೆ ವಾಯುಯಾನದ ವ್ಯವಸ್ಥಾಪಕ ನಿರ್ದೇಶಕರು ಅವರ ಸೇವಾ ಅವಧಿಯನ್ನು ಹತ್ತು ವರ್ಷಗಳ ಕಾಲ ವಿಸ್ತರಿಸುವ ವಿವೇಚನೆಯನ್ನು ಹೊಂದಿರುತ್ತಾರೆ. ಆದರೆ ಪುರುಷ ಸ್ಟೂವರ್ಟ್‌ಗಳಿಗೆ ಮಾತ್ರ ನಿವೃತ್ತಿ ವಯಸ್ಸು 58 ವರ್ಷಗಳು.

ಸರ್ವೋಚ್ಚ ನ್ಯಾಯಾಲಯ ನಿಯಮಗಳ ಪ್ರಕಾರ ಗಗನಸಖಿ ತನ್ನ ಸೇವೆಯನ್ನು 19 ರಿಂದ 26ರ ನಡುವಿನ ವಯಸ್ಸಿನಲ್ಲಿ ಪ್ರಾರಂಭಿಸುತ್ತಾಳೆ. ಗಗನ ಸಖಿಯರಲ್ಲಿ ಬಹು ಮಂದಿ ಕನಿಷ್ಠ ವಿದ್ಯಾರ್ಹತೆಯಾದ ಎಸ್‌ಎಲ್‌ಸಿ ಅರ್ಹತೆಯನ್ನು ಹೊಂದಿರುತ್ತಾರೆ. ಕೆಲವರು ಇನ್ನೂ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿರುತ್ತಾರೆ. ಇವರು ಸೇವೆಗೆ ಸೇರಿದ ಕೂಡಲೇ ಮದುವೆಯಾಗಲು ನಿರ್ಧರಿಸುವ ಸಾಧ್ಯತೆ ಬಹು ಕಡಿಮೆ. ಹಾಗಾಗಿ ನಿಯಮಗಳ ಪ್ರಕಾರ ಗಗನಸಖಿ 19ನೇ ವಯಸ್ಸಿನಲ್ಲಿ ಸೇವೆಗೆ ಸೇರಿದರೆ 23ನೇ ವರ್ಷದಲ್ಲಿ ಮದುವೆಯಾಗಬಹುದಾಗಿ ರುತ್ತದೆ. ಇದು ನೌಕರಳ ಆರೋಗ್ಯಕ್ಕೆ ಒಳ್ಳೆಯದಷ್ಟೇ ಅಲ್ಲ ಕುಟುಂಬ ಯೋಜನೆಗೂ ಚಾಲನೆ ಸಿಗುತ್ತದೆ. ಆದ್ದರಿಂದ ಇದು ಸಮಾನತೆಯ ಹಕ್ಕುಗಳಿಗೆ ಭಂಗ ತರುವುದೆಂದು ಭಾವಿಸತಕ್ಕದಲ್ಲ ಎಂದು ಅಭಿಪ್ರಾಯಪಡಲಾಯಿತು.

ಎರಡನೆಯದಾಗಿ ಆಕೆ ಗರ್ಭಿಣಿಯಾದ ಕೂಡಲೇ ಕೆಲಸವನ್ನು ಬಿಡುವಂತೆ ಆಕೆಯನ್ನು ಕೇಳಬೇಕು ಎಂಬುದು. ಅದಕ್ಕೆ ಸರ್ವೋಚ್ಚ ನ್ಯಾಯಾಲಯವು "ವಿವಾಹಿತ ಮಹಿಳೆ ಕೆಲಸದಲ್ಲಿ ಮುಂದುವರಿಯಬಹುದು ಎಂದ ಕೂಡಲೇ ಪ್ರಸೂತಿ ಸೌಲಭ್ಯ ಅಧಿನಿಯಮ, 1961ರ ಅಡಿಯಲ್ಲಿ ಆಕೆ ಪ್ರಸೂತಿ ರಜೆಯೂ ಸೇರಿದಂತೆ ಅನೇಕ ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವಳಾಗುತ್ತಾಳೆ" ಎಂದು ಅಭಿಪ್ರಾಯಪಟ್ಟಿತು.

ಮಹಿಳೆ ಮದುವೆಯಾದ ಕೂಡಲೇ ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲಳಾಗುತ್ತಾಳೆ ಎಂಬ ವಿಮಾನಯಾನದ ವ್ಯವಸ್ಥಾಪಕರ ವಾದವನ್ನು ನ್ಯಾಯಾಲಯ ಸಾರಾಸಗಟಾಗಿ ತಿರಸ್ಕರಿಸಿತು. ಅಲ್ಲದೆ ಇಂಥದೊಂದು ನಿಯಮ ಸ್ತ್ರೀತ್ವದ ಅಪಮಾನ ಹಾಗೂ ಮಹಿಳೆಗೆ ಸಹಜವಾಗಿ ದತ್ತವಾಗಿರುವ ತಾಯ್ತನದ ಕ್ರೂರ ಕೊಲೆ ಅಷ್ಟೇ ಅಲ್ಲ, ಅದು ಅನಾಗರಿಕವಾದದ್ದು ಎಂದು ತೀರ್ಪು ನೀಡಿತು. ಇಷ್ಟೇ ಅಲ್ಲದೆ, ಸರ್ವೋಚ್ಚ ನ್ಯಾಯಾಲಯ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಅತ್ಯಾಚಾರ, ಅಥವಾ ಮೋಸಕ್ಕೆ ಬಲಿಯಾಗಿ ಗರ್ಭಿಣಿಯರಾದ ಸ್ತ್ರೀಯರಿಗೆ ಈ ನಿಯಮವನ್ನು ಅನ್ವಯಿಸಿದರೆ ಅವರದಲ್ಲದ ತಪ್ಪಿಗೆ ಅವರಿಗೆ ಶಿಕ್ಷೆ ವಿಧಿಸಿದಂತಾಗುತ್ತದೆ ಎಂದೂ ಅಭಿಪ್ರಾಯಪಟ್ಟಿತು. ಅದೇ ತೀರ್ಪಿನಲ್ಲಿ , ಅವರು, ಎರಡು ಮಕ್ಕಳಿಗಿಂತ ಹೆಚ್ಚು ಮಕ್ಕಳನ್ನು ಹೊಂದುವಂತಿಲ್ಲವೆಂದೂ ವಿಧಿಸಿತು. ಮುಂದೆ ಈ ಬಗ್ಗೆ ಅನೇಕ ಬದಲಾವಣೆಗಳಾದುವು ಮತ್ತು ಕೆಲಸಕ್ಕೆ ಸೇರಿದ ನಾಲ್ಕು ವರ್ಷಗಳವರೆಗೆ ಮದುವೆಯಾಗುವಂತಿಲ್ಲ ಎಂಬ ಷರತ್ತನ್ನು ತೆಗೆದುಹಾಕಬೇಕೆಂಬ ಸರ್ಕಾರದ ನಿರ್ಧಾರವನ್ನು ಒಪ್ಪಿಕೊಂಡಿತು.

ಸಂವಿಧಾನ ನೀಡಿರುವ ಹಕ್ಕನ್ನು ಮಹಿಳೆಯರಿಗೆ ದೊರಕಿಸಿ ಕೊಡುವಲ್ಲಿ ಈ ತೀರ್ಪು ಮಹತ್ತರವಾದುದು.

ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ತಾರತಮ್ಯ ತೋರುವಂತಿಲ್ಲವೆಂಬುದನ್ನು ಶ್ರೀಮತಿ ಸಿ.ಬಿ. ಮುತ್ತಮ್ಮ ಪ್ರಕರಣ ಎತ್ತಿ ಹಿಡಿಯಿತು. ಈಕೆ ತನಗೆ ಪದೋನ್ನತಿಯನ್ನು ನಿರಾಕರಿಸಲಾಗಿದೆಯೆಂದು ದೂರಿ ಮಹಿಳೆಯರಿಗೆ ಅನ್ಯಾಯವೆಸಗುತ್ತಿದ್ದ ಭಾರತೀಯ ವಿದೇಶ ಸೇವೆಯ ಎರಡು ನಿಯಮಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಅದುವರೆಗೆ ಜಾರಿಯಲ್ಲಿದ್ದ ನಿಯಮದ ಪ್ರಕಾರ - 1) ಭಾರತದ ವಿದೇಶಿ ಸೇವೆಗೆ ಸೇರಿದ ಮಹಿಳೆ ಮದುವೆಯಾಗುವುದಕ್ಕೆ ಮುನ್ನ ಸರ್ಕಾರದಿಂದ ಲಿಖಿತ ಅನುಮತಿ ಪಡೆಯಬೇಕು. ವಿವಾಹದ ನಂತರ ಆಕೆಯ ಕುಟುಂಬ ಹಾಗೂ ಮನೆಗೆ ಸಂಬಂಧಿಸಿದಂತೆ ಅವಳಿಗಿರುವ ಕರ್ತವ್ಯಗಳು ಅವಳ ಕೆಲಸಕ್ಕೆ ಅಥವಾ ದಕ್ಷತೆಗೆ ಅಡ್ಡಿಯನ್ನುಂಟು

ಮಾಡುತ್ತಿದೆಯೆಂದು ಕಂಡುಬಂದರೆ ಕೆಲಸಕ್ಕೆ .ರಾಜೀನಾಮೆ ಕೊಡುವಂತೆ ಆಕೆಯನ್ನುಕೇಳಬಹುದು. (2) ವಿವಾಹಿತ ಮಹಿಳೆ ಈ ಸೇವೆಗೆ ನೇಮಕಾತಿ ಹೊಂದುವುದು ತನ್ನ ಹಕ್ಕು ಎಂದು ಕೇಳುವಂತಿಲ್ಲ.

ಈ ಎರಡೂ ನಿಯಮಗಳು ಲಿಂಗಭೇದವನ್ನು ತೋರುವಂಥ ವೆಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿತು. ಅಲ್ಲದೆ ಈಗಿನ ವಿಭಕ್ತ ಕುಟುಂಬಗಳಲ್ಲಿ ವಿವಾಹ ಸ್ತ್ರೀ ಪುರುಷರಿಬ್ಬರ ಮೇಲೆ ಒಂದೇ ಪರಿಣಾಮ ಬೀರುತ್ತದೆ. ಇಂಥ ನಿಯಮ ಪುರುಷ ಪ್ರಧಾನ ಸಮಾಜದ ಮತ್ತೊಂದು ಉದಾಹರಣೆ ಎನ್ನಬೇಕು. ಆದರೆ ಕೆಲವೊಂದು ವಿಶೇಷ ಹುದ್ದೆಗಳು ಪುರುಷರನ್ನು ಅಥವಾ ಸ್ತ್ರೀಯರನ್ನು ಮಾತ್ರ ನೇಮಕ ಮಾಡಿಕೊಳ್ಳುವಂಥ ಸ್ವರೂಪದ್ದಾಗಿ ರಬಹುದು. ಅಂಥ ಸಂದರ್ಭಗಳಲ್ಲಿ ಸಮಾನತೆಯನ್ನು ವಿವೇಚನೆಯಿಲ್ಲದೆ ಹೇರಬಾರದು . ಎಂಬುದನ್ನು ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ.

ಸ್ತ್ರೀಯರ ಪರವಾಗಿ ಕಾನೂನು ರಚಿಸಲು ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅನುಚ್ಛೇದ 15(3)ರ ಅಡಿಯಲ್ಲಿ ಸ್ತ್ರೀಯರ ಪರವಾಗಿ ಮಾಡಿದ ಅನೇಕ ಶಾಸನಬದ್ಧ ಉಪಬಂಧಗಳನ್ನು ಎತ್ತಿ ಹಿಡಿಯಲಾಗಿದೆ.

ಯೂಸುಫ್ ಅಬ್ದುಲ್ ಅಜೀಜ್-ವಿ-ಮುಂಬೈ ರಾಜ್ಯ ಪ್ರಕರಣದಲ್ಲಿ ಮೇಲ್ಮನವಿದಾರ ಭಾರತ ದಂಡ ಸಂಹಿತೆಯ 467ನೇ ಪ್ರಕರಣದ ಸಂವಿಧಾನ ಬದ್ಧತೆಯನ್ನು ಪ್ರಶ್ನಿಸಿದ. ಈ ಪ್ರಕರಣದಲ್ಲಿ ವ್ಯಭಿಚಾರವೆಸಗಿದ ಪುರುಷನನ್ನು ಶಿಕ್ಷಿಸಲಾಗುತ್ತದೆ. ಆದರೆ ಈ ಅಪರಾಧದಲ್ಲಿ ಸಮಾನ ಪಾತ್ರ ವಹಿಸುವ ಸ್ತ್ರೀಗೆ ಶಿಕ್ಷೆ ವಿಧಿಸುವುದಿಲ್ಲ. ಇದರಿಂದಾಗಿ ಲಿಂಗಭೇದ ತೋರಿದಂತಾಗಿದೆ. ಆದ್ದರಿಂದ ಸಂವಿಧಾನವು 15(1)ನೆಯ ಅನುಚ್ಛೇದವನ್ನು ಉಲ್ಲಂಘಿಸಿದಂತಾಗಿದೆ ಎಂಬ ವಾದವನ್ನು ಮಂಡಿಸಿದನು. ಆದರೆ ಸರ್ವೋಚ್ಚ ನ್ಯಾಯಾಲಯ ಈ ವಾದವನ್ನು ತಳ್ಳಿಹಾಕಿತು. ಆಕೆ ಮಹಿಳೆ ಎಂಬ ಕಾರಣಕ್ಕೆ ಮತ್ತು ಭಾರತದಲ್ಲಿನ ಸ್ತ್ರೀಯರ ಸ್ಥಾನಮಾನವನ್ನು ಗಣನೆಗೆ ತೆಗೆದುಕೊಂಡು ಅವಳಿಗೆ ಶಿಕ್ಷೆ ವಿಧಿಸಲಾಗಿಲ್ಲವೆಂದು ಹಾಗೂ 15(3)ನೇ ಅನುಚ್ಛೇದದ ಮೇರೆಗೆ ಸ್ತ್ರೀಯರಿಗೆ ಅನುಕೂಲವಾಗುವ ಉಪಬಂಧ ಕಲ್ಪಿಸುವ ಅವಕಾಶವನ್ನು ಸಂವಿಧಾನ ನೀಡಿದೆಯೆಂದು ತಿಳಿಸಿತು.

ಹಾಗೆಯೇ, ಪುರಸಭೆಯ ಸ್ಥಾನಗಳಿಗೆ ನಡೆಯುವ ಚುನಾವಣೆಗಳಲ್ಲಿ ಮಹಿಳೆಯರಿಗೆ ಇರುವ ಸ್ಥಾನಗಳ ಮೀಸಲಾತಿಯನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ಈಗ ಸರ್ಕಾರೀ ನೇಮಕಾತಿಗಳಲ್ಲಿ ಹಾಗೂ ಶಾಸನ ಸಭೆ ಹಾಗೂ ಸಂಸತ್ತುಗಳಲ್ಲಿನ ಮಹಿಳಾ ಮೀಸಲಾತಿಯೂ ಈ ಅನುಚ್ಛೇದದ ಅಡಿಯಲ್ಲಿ ನೀಡಲಾದ ವಿಶೇಷ ಸವಲತ್ತಾಗಿದೆ.

ಯಾವ ಸಂದರ್ಭಗಳಲ್ಲಿ ಪುರುಷರನ್ನು ಜಾಮೀನಿನ ಮೇಲೆ ಕಾರಾಗೃಹದಿಂದ ಬಿಡುಗಡೆ ಮಾಡುವುದಿಲ್ಲವೋ ಅದೇ ಸಂದರ್ಭಗಳಲ್ಲಿ ಸ್ತ್ರೀಯರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಕಾನೂನು ಅವಕಾಶ ಕಲ್ಪಿಸುತ್ತದೆ. ಇದನ್ನು ಸಹ ನ್ಯಾಯಾಲಯ ಎತ್ತಿ ಹಿಡಿದಿದೆ.

ನ್ಯಾಯಾಲಯದ ಸಮನ್ಸುಗಳನ್ನು ಕುಟುಂಬದ ಪ್ರಾಪ್ತ ವಯಸ್ಕನಾದ ಪುರುಷನಿಗೆ ಮಾತ್ರ ಜಾರಿ ಮಾಡಬೇಕೆಂಬ ನಿಯಮವನ್ನು ಸಹ, ಮಹಿಳೆಗೆ ಅನುಕೂಲ ಕಲ್ಪಿಸುವುದಕ್ಕಾಗಿ ಮಾಡಲಾದ ತಾರತಮ್ಯವೆಂಬ ಕಾರಣದ ಮೇಲೆ ಎತ್ತಿ ಹಿಡಿಯಲಾಯಿತು.

ಆದ್ದರಿಂದ ಸರ್ಕಾರ ಮಹಿಳೆಯರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ತಾರತಮ್ಯ ಮಾಡಬಹುದೇ ವಿನಃ ಮಹಿಳೆಯರಿಗೆ ಪ್ರತಿಕೂಲವಾದ ಯಾವುದೇ ತಾರತಮ್ಯವನ್ನು ಮಾಡುವಂತಿಲ್ಲ. ಹಾಗೆ ಸಂವಿಧಾನದ 15(3)ರ ಅಡಿಯಲ್ಲಿ ಮಹಿಳೆಯರ ಪರವಾಗಿ ಮಾಡಿದ ಯಾವುದೇ ತಾರತಮ್ಯವನ್ನು ಅದು 16(2)ನೇ ಅನುಚ್ಛೇದವನ್ನು ಉಲ್ಲಂಘಿಸುತ್ತದೆಂಬ ಕಾರಣಕ್ಕಾಗಿ ರದ್ದುಪಡಿಸಲಾಗದು.

ಭಾರತದಲ್ಲಿ ಹೆಚ್ಚು ಗಮನಕ್ಕೆ ಬಾರದ ಮತ್ತೊಂದು ಪ್ರಕರಣ ವೆಂದರೆ ಮುಂಬಯಿ ಕಾರ್ಮಿಕ ಸಂಘಟನೆ-ವಿ-ಫ್ರಾಂಚೈಸೆಸ್ (ಪ್ರೈ) ಲಿಮಿಟೆಡ್ (ಎ.ಐ.ಆರ್। 1966 ಸರ್ವೋಚ್ಚ ನ್ಯಾಯಾಲಯ 42), 15 (1)ನೇ ಅನುಚ್ಛೇದದ ಮೂಲಕ ಕೊಡಮಾಡಿರುವ ಸ್ತ್ರೀ ಪುರುಷರ ಸಮಾನತೆಯ ಹಕ್ಕನ್ನು ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಎತ್ತಿ ಹಿಡಿದಿದೆ. ಮದುವೆಯ ನಂತರ ಸ್ತ್ರೀ ಉದ್ಯೋಗಿಗಳು ಉದ್ಯೋಗಕ್ಕೆ ರಾಜೀನಾಮೆ ನೀಡಬೇಕೆಂದು ವಿಧಿಸುವ ಕಂಪನಿಯ ನಿಮಯಗಳನ್ನು ಉದ್ಯೋಗಿಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿ ಅದು ತಮ್ಮ ಮೂಲಭೂತ ಹಕ್ಕಿನಿಂದ ತಮ್ಮನ್ನು ವಂಚಿತರನ್ನಾಗಿಸುವುದರಿಂದ ಅದನ್ನು ತೆಗೆದು ಹಾಕಲು ನಿರ್ದೇಶನ ನೀಡಬೇಕೆಂದು ಕೋರಿದ್ದರು.

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ತೀರ್ಪು ನೀಡುತ್ತಾ "ಮಹಿಳೆಯರು ದೀರ್ಘಕಾಲ ಕೆಲಸದಿಂದ ಗೈರುಹಾಜರಾಗುವಂಥದ್ದು ಅವರು ಪ್ರಸೂತಿ ರಜೆ ಪಡೆದಾಗ ಮಾತ್ರ. ಅಂತ ಸಂದರ್ಭದಲ್ಲಿ ರಜೆ ಅವಧಿಗೆ ಬೇರೆಯವರನ್ನು ನೇಮಿಸಿಕೊಳ್ಳುವ ಮೂಲಕ ಈ ತೊಂದರೆಯನ್ನು ನಿವಾರಿಸಬೇಕು. ಅದನ್ನು ಬಿಟ್ಟು ಆ ಕಾರಣಕ್ಕಾಗಿ ರಾಜೀನಾಮೆ ಕೊಡುವಂತೆ ಅವರನ್ನು ಕೇಳುವುದು ಬರ್ಬರವಾದದ್ದು" ಎಂದು ಅಭಿಪ್ರಾಯಪಟ್ಟರು. ಅಲ್ಲದೆ, ಉದ್ಯೋಗಸ್ಥ ವಿವಾಹಿತ ಮಹಿಳೆಯ ಬಗ್ಗೆ ಸಮಾಜದ ದೃಷ್ಟಿಕೋನವನ್ನು ನಿರ್ದೇಶಿಸುವಂಥ ಅವರ ಕೆಲವು ಮಾತುಗಳು ಅತ್ಯಂತ ಗಮನಾರ್ಹ. "ಉದ್ಯೋಗ

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

April - 2005

ಹಾಗೂ ವಿವಾಹ ಇವೆರಡೂ ಪ್ರತ್ಯೇಕ ಎಂದು ನಂಬಲು ಕಾರಣ ಅವಳು ಗೃಹಕೃತ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದು. ಆದರೆ ಮಗುವಿಗೆ ತಾಯಿಯಾಗಿರುವ ಹಾಗೂ ಉದ್ಯೋಗ ಮಾಡಲು ಮಹಿಳೆಗಿರುವ ಮೂಲಭೂತ ಹಕ್ಕುಗಳ ನಡುವೆ ಸಂಘರ್ಷ ಉಂಟು ಮಾಡುತ್ತಿರುವುದು ನಿಜಕ್ಕೂ ಶೋಚನೀಯ. ಸರಿಯಾಗಿ ನೋಡಿದರೆ, ಇದು ಎರಡು ಮೂಲಭೂತ ಅಂಶಗಳ ಹೊಂದಾಣಿಕೆಯ ಪ್ರಶ್ನೆ. ಅಗತ್ಯತೆಯಿಂದ ಅಥವಾ ಸಮಾಜ ಸೇವೆಯ ಅದಮ್ಯ ಆಶಯದಿಂದ ಅಥವಾ ರಾಷ್ಟ್ರದ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಇಚ್ಛೆಯಿಂದ ಉದ್ಯೋಗ ಮಾಡುವ ಮಹಿಳೆ ಸಮಾಜಕ್ಕೆ ಎರಡು ರೀತಿಯ ಕೊಡುಗೆ ನೀಡುತ್ತಾಳೆ. ಮೊದಲನೆಯದಾಗಿ, ಪ್ರತ್ಯಕ್ಷವಾಗಿ ಎಂದರೆ ಕಛೇರಿ ಅಥವಾ ಕಾರ್ಖಾನೆ ಅಥವಾ ಪ್ರಯೋಗಾಲಯ ಅಥವಾ ಶಾಲೆಯಲ್ಲಿ ಅವಳು ಮಾಡುವ ಉತ್ಪಾದನಾ ಕೆಲಸ ಮತ್ತು ಎರಡನೆಯದಾಗಿ, ತಾಯಿಯಾಗಿ ಅಪರೋಕ್ಷವಾಗಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜಕ್ಕೆ ಸಲ್ಲಿಸುವ ಸೇವೆ. ಹಾಗೆ ನೋಡಿದರೆ ಎರಡನೆಯ ಕೆಲಸವೇ ಅವಳ ಪ್ರಮುಖ ಕೆಲಸವಾಗಬೇಕು. ಇಲ್ಲದಿದ್ದಲ್ಲಿ ಸಮಾಜವೇ ನಿರ್ನಾಮವಾಗಿ ಬಿಡುತ್ತದೆ.''

''ತಾಯ್ತನದ ಕೆಲಸ ಅವಳ ಸಹಜವಾದ ಕೆಲಸವೆಂದು ಪರಿಗಣಿಸಿಬಿಡುವುದರಿಂದ, ಆದರಿಂದ ಅವಳು ಅನುಪಮ ಮಾನಸಿಕ ಸಮಾಧಾನವನ್ನು ಪಡೆಯುತ್ತಾಳಾದ್ದರಿಂದ ಆ ಕೆಲಸವನ್ನು ತೀರ ಹಗುರವಾಗಿ ಭಾವಿಸುವಂತಿಲ್ಲ. ದೈಹಿಕವಾಗಿ, ಅಷ್ಟೇ ಅಲ್ಲದೆ ದುಡಿಮೆಯ ದೃಷ್ಟಿಯಿಂದಲೂ ಅದು ಶ್ರಮದಾಯಕವಾದುದೇ. ಆದರೆ ಮಹಿಳೆ ತಾನೇ ಸ್ವಇಚ್ಛೆಯಿಂದ ಈ ಎರಡೂ ಕೆಲಸಗಳ ಭಾರವನ್ನು ಹೊರಲು ಸಂತೋಷದಿಂದ ಒಪ್ಪಿರುವುದರಿಂದ, ಶಿಶುವಿಹಾರಗಳನ್ನು ತೆರೆಯುವ ಮೂಲಕ, ಒಪ್ಪತ್ತಿನ ಉದ್ಯೋಗಾವಕಾಶಗಳನ್ನು ಸೃಜಿಸುವ ಮೂಲಕ ಹಾಗೂ ಪ್ರಸೂತಿ ರಜೆ ಸೌಲಭ್ಯ ಮತ್ತು ಕೆಲವು ವೃತ್ತಿಗಳಲ್ಲಿ ಉದ್ಯೋಗಪರ ತರಬೇತಿ ನೀಡುವ ಮೂಲಕ ಅವಳಿಗೆ ಒತ್ತಾಸೆ ನೀಡಬೇಕು.''

ಸ್ತ್ರೀ-ಪುರುಷರಲ್ಲಿ ಸಮಾನತೆಯನ್ನು ಕಲ್ಪಿಸಬೇಕೆನ್ನುವುದರ ವಿರುದ್ಧ ಅಪಸ್ವರವೆತ್ತುವ ವರ್ಗಕ್ಕೆ ಮೇಲಿನ ಮಾತು ಸಮರ್ಪಕವಾದ ಉತ್ತರ.

❑

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri